WPP-47

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೭	ಬೆಂಗಳೂರು, ಗುರುವಾರ, ಮೇ ೧೦, ೨೦೧೨ (ವೈಶಾಖ ೨೦, ಶಕ ವರ್ಷ ೧೯೩೪)	ಸಂಚಿಕೆ ೧೯

ಭಾಗ – ೧

ರಾಜ್ಯ ಸರ್ಕಾರದ ಮುಖ್ಯ ಆದೇಶಗಳು ಹಾಗೂ ಸುತ್ತೋಲೆ ಮುಂತಾದ ಎಲ್ಲಾ ಇಲಾಖೆಗಳಿಗೂ ಸಂಬಂಧಿಸಿದ ಆದೇಶಗಳು

URBAN DEVELOPMENT SECRETARIAT

Sub : Exemption of land at R.S.No.7, 5A3B/1 and 5A/3B/2 – total extent of 27 acres 5 guntas of surplus land owned by Chandrashekrappa.G.Sullad and others, Bommapura Village, Hubli Taluk, Provisions of ULC Act, 1976 – Repeal of ULC Act, 1976 – Repealed – Proceedings stand abated – orders – reg.

READ :-

1) Government Order No.HUD 49 UEH 86, dated.17-09-1987.
2) Government Order No.HUD 49 UEH 86, dated.12-05-1988.
3) Government Order No.HUD 390 DTP 89, dated.06-02-1992.
4) Government Order No.HUD 49 UEH 86, dated.31-03-1992.
5) Orders dated.06-03-1995 of the Prinicpal Civil Judge, Hubli in O.S.No.55/1993.
6) Circular No.UDD 25 ULC 99, dated.17-09-1999.
7) Orders dated.18-11-2003 of the High Court of Karnataka in W.P.No.41615/2002.
8) Orders dated.20-12-2007 of the High Court of Karnataka in R.F.A.No.265/1995.
9) Orders dated.15-4-2008 of the Hon'ble Supreme Court in S.L.P.No.5363/2008.
10) Government Order No.HUD 10 ULC 2009, dated.11-08-2009.
11) Orders dated.16-06-2010 of the High Court of Karnataka in W.P.No.26017/2009.
12) Orders dated.28-01-2011 of the Principal Civil Judge, Hubli in the Misc. Case No.21/2008.
13) Government Notice No.UDD 28 ULC 2009, dated.08-10-2010.
14) Petitions dated.25-10-2010, 28-10-2010 and 25-01-2011 filed by the Landlords.
15) Petitions dated.18-12-2010, 18-02-2011 and 22-07-2011 filed by the Tuheed House Building Co-operative Society, Hubli.
16) Additional Deputy Commissioner, Dharwad, letter No.ULCR/4082+4085+4086+4087+4088, dated.20-10-2011.

PREAMBLE:-

1. Sri. Chandrashekarappa, S/o.Gurusiddappa Sullad and others(land owners) were the owners of lands at R.S.No.7(CTS.5357) 18 acres 18 guntas, R.S.No.5A/3B/1 (CTS.5297) 4 acres 37 guntas, R.S.No.5A/3B/2 (CTS 5297/B) 3 acres 30 guntas and other lands, within the limits of Bommapura Village in Hubli Taluk. They declared under Section.6 of the Urban Land (Ceiling & Regulation) Act 1976 that they are owning these three bits of lands in all measuring 27 acres 5 guntas in excess of the ceiling limit, fixed by the Government under the Act.

2. Sri.Chandrashekarappa.G.Sullad and others, entered into Agreement of Sale on 7-3-1986 with the Tuheed House Building Co-operative Society, Hubli(Society) to sell 22 acres to the Society out of 27 acres 5 guntas at the rate of Rs.35,000/- per acre.

3. Sri.Chandrashekarappa.G.Sullad and others submitted a representation under Sec.20(1)A of the above said Act to the Government seeking exemption from the Government.

4. In Government Order dated.17-9-1987 read at Sl.No.(1) above, Government accorded exemption subject to the following conditions, among other things:

(i) That the land should be sold to the said society within six months;

(ii) That the land should be got converted for non-agriculture purposes before it is being sold;

(iii) That the land should be got converted into residential sites and be allotted to the members of the society only;

(iv) That the approval of Hubli-Dharwad Development Authority and that the land use be made strictly in accordance with the comprehensive plan etc.,

It also directed that the exemption order shall become infructous if any of the above conditions were to be violated.

5. In Government Order dated.12-5-1988 read at sl.no.(2) above, the period of six months imposed vide Government Order dated.17-09-1987, was extended for one year from 17-3-1988 to 16-03-1989. The time limit was extended from 17-3-1989 to 16-3-1990 and from 17-3-1990 to 16-3-1991 and from 17-3-1991 to 16-3-1992. However, the execution of the sale deed did not take place. Further the time limit was extended upto 30-3-1994, vide G.O.dated.31-03-1992 read at sl.no.(4) above, as the society cannot possess an agricultural land under Section.79-B of the Karnataka Land Reforms Act, 1961.

6. Thereafter, there was no extension of time limit beyond 31-3-1994, till today. No execution of the sale deed took place. Hence, there has been a violation of the conditions stipulated in the G.O.dated.17-09-1987, read at sl.no.(1) above, when there was no extension of the time limit beyond 31-3-1994 then Government had the power in taking over the actual possession of these three bits of lands w.e.f.1-4-1994 till to the date of repealing of the ULC Act, 1976. When the Act is repealed the General Clauses Act comes into play according to the situations, circumstances and facts of the case. But no action was taken by the Government during this period as litigations were pending in the Law Courts. The names of land owners were appearing in Kabjedar Column and in the other rights column of the RTC, still mention was being made regarding the four conditions imposed by the Government vide G.O.No.HUD 49 UEH 86, dated.17-9-1987.

7. In the meanwhile, in Government Order dated.6-2-1992, read at sl.no.(3) above, sanction to the change of land use from “agricultural” to “non-agricultural” purposes was accorded.

8. The Society obtained approval to a residential layout plan from the Hubli-Dharwad Urban Development Authority vide orders dated.12-08-1993. Since the said lands got merged into the City Survey limits of Hubli, society got the survey works done from the Department of City Survey and said to have distributed sites to 377 members.

9. Inspite of all these developments the landowners did not come forward in executing the “Sale deed” instead declined to do it in favour of the Society. At that time itself, the society could have brought this fact to the notice of the Government to enable it to take further action in the matter under the provisions of ULC Act, 1976. But the society failed. The opportunity which was available to the Society, was not availed by it.

10. Instead the society filed suit O.S.No.55/93 in the Court of Civil Judge, Sr.Division, Hubli, against Chandrashekarappa and others only for "Specific Performance" in so far as the agreement dated.7-3-1986 is concerned, where in it did not implead the Government as one of the defendants. The suit O.S.55/93 was decreed by the Court on 6-3-1995 and Chandrashekarappa and others were directed to execute a regular registered Sale deed in favour of the society after receiving the balance consideration amount.

11. Aggrieved by the judgement and decree dated.6-3-1995 the above named landowners filed RFA.265/95 before the High Court of Karnataka on 25-5-1995, with a prayer to set aside the judgement and decree passed in O.S.No.55/93 dated.6-3-1995 and to dismiss the suit. During the pendency of RFA 265/1995, the ULC Act, 1976, stood repealed w.e.f. 17-09-1999.

12. Hon'ble High Court of Karnataka in Regular First Appeal No.265 of 1995 passed the following orders, for certain reasons cited in their judgement dated.20-12-2007:-

" We allow this appeal, set aside the judgement and decree passed by Trial Court and by directing the appellants to pay a sum of Rs.12,63,747/-(Rs.7,00,000/- towards the refund of advance sale consideration, and Rs.5,63,747/- towards reimbursement of the expenditure incurred by the first respondent society towards obtaining the clearance with interest at 9% per annum). It is clarified that the interest payable is from 7th March 1986, 22nd October 1992 and 5th August 1983, which amounts to Rs.7,00,000/- Rs.2,72,250/- and Rs.2,91,547/- respectively".(ILR 2008 Kar.4003).

13. Aggrieved by the above judgement of the Hon'ble High Court of Karnataka in RFA No.265/1995, the society filed SLP(CC) No.5363/2008 before the Hon'ble Supreme Court of India, which was dismissed on 15-4-2008.

14. Further, Sri.Chandrashekarappa and others filed Misc.Case No.21/ 2008 in the Court of the Civil Judge Sr.Division, Hubli, on 30-5-2008 with a prayer to permit to deposit the amount as directed by the Hon'ble High Court of Karnataka and to direct the Society to receive the same. The Landowners deposited Rs.33,16,819 in the State Bank of India, Vidyanagar Branch, Hubli under R.O.No.194505 as per the orders of the Hon'ble High Court. The case was finally disposed off on 28-1-2011.

15. On the representation dated.21-10-2008 submitted by the 'Society', the Deputy Commissioner, Dharwad District requested the Government through his report dated.22-06-2009 that the said lands should be acquired, as the landowners have violated the conditions stipulated in the Government Order dated.17-09-1987. By order dated.11-8-2009, read at sl.no.10 above, Government acquired the above said lands and re-allotted the same to the Society, in exercise of the powers under Section.6 of the General Clauses Act 1897 and directed the society to pay the prevailing rates of 1987-88.

16. Aggrieved by the said orders dated.11-8-2009 the landowners filed W.P.No.26017/2009 before the Hon'ble High Court of Karnataka. In their orders dated.16-6-2010 the High Court disposed off the said Writ Petition and quashed the Government Order dated.11-8-2009.The Hon'ble High Court of Karnataka remanded the matter for fresh disposal in accordance with law after giving an opportunity to both the parties. Further, the land owners filed W.A.6273/2010 before the Hon'ble High Court, which was however withdrawn on 13-12-2010.

17. In pursuance of the orders dated.16-06-2010 passed by the Hon'ble High Court in W.P.No.26017/2009 (ULC) Government had provided an opportunity to both the parties to defend their cases. Accoridngly, the landowners as also the Taheed House Building Co-operative Society, Hubli have submitted their petitions read at sl.nos.14 & 15.

18. The Additional Deputy Commissioner, Dharwad in his letter read at (16)above, has stated that the land is vacant and neither of the parties are in possession of the land in question nor the Government has taken possession as per Section.10(3) & (5) of ULC Act 1976 and before Repeal of the said Act which came into existence on 17-9-1999. Since the names of the land owners Sri.Chandrashekarappa G.Sullad and others have been appeared in the Record of Rights, the Special Deputy Commissioner, Dharwad has requested to take appropriate decision at the Government level as per the opinion of the Law Department and as per the orders of Hon'ble High Court of Karnataka dated.20-12-2007 in RFA No.265/1995 and also as per the orders of the Hon'ble Supreme Court of India dated.15-4-2008 in SLP No.5363/2008.

19. All the contentions and pleas urged by both the parties have been carefully and completely examined by the Government with reference to the records and provisions of law as applicable to the case in consultation with the Law, Justice and Human Rights Department, keeping in view the principles of natural justice and equity.

20. Further, Govt, has also considered the observation of the Hon'ble High Court in W.P.No.46294/2003 dated 10-09-2004 where in it has held that "clause (c) of sub section (1) of section 3 makes it clear that where exemption is granted under section 20 of the Urban Land (Ceiling and Regulation) Act, the repeal of the principal Act shall not effect. But nothing prevents or restricts the power of the government to invoke the provisions of section 6 of the General Clauses Act and to pass appropriate orders. The authority which granted exemption is the same authority which is competent to pass appropriate orders in the matter."

21. The Hon'ble High court in R.F.A.No.265/1995 has set aside the sale agreement between the land owners and the Tuheed House Building Co-operative Society (Regd). Aggrieved by the said order of the Hon'ble High Court, the society filed S.L.P(CC) No.5363/2008, before the Hon'ble Supreme Court which was dismissed on 15/04/2008. In the circumstances the Tuheed HBCS have not got any legitimate claims over the lands in question.

22. Further, on examination of the records following facts are pointed out;

(i) The Urban Land (Ceiling and Regulation) Act, 1976 was repealed by The Urban Land (Ceiling and Regulation) Repeal Act, 1999. As per Section 6 of the Mysore General Clauses Act 1899,

<u>6. Effect of repeal</u> - Where this Act or [any Mysore Act or Karnataka Act] made after the commencement of this Act repeals any enactment hitherto made or hereafter to be made, then, unless a different intention appears, the repeal shall not ……

affect any right, privilege, obligation or liability acquired, accrued or incurred under any enactment so repealed;…

In the present case, the order dated 17-09-1987 created not only right in favor of the land owner in the form of exemption under Section 20(1)(a) but also imposed obligation in form of conditions included in the same order. Since right was created concomitant to the performance of the obligation, the order needs to be seen in its entirety. Particular attention is drawn on condition number 13 in the said order as follows

"(13) ಮೇಲೆ ನಮೂದಿಸಿರುವ ಯಾವುದೇ ಷರತ್ತನ್ನು ಉಲ್ಲಂಘಿಸಿದಲ್ಲಿ ವಿನಾಯಿತಿ ನೀಡಿದ ಈ ಆದೇಶವು ರದ್ದಾಗುವುದು"

Therefore, it seems incorrect to detach the two at this stage

(ii) Justification is sought to be created on the ground that the society initiated litigation and so the owner is not responsible for default. Here the following may be noted;

a) First of all, government was not a party to any of the disputes. Even though the rights of both parties were known to be not absolute but derived from the exemption granted under Section 20(1)(a) by the government, they chose to keep government away from the dispute. It needs to be made clear here that had exemption order not been granted, action under S10 should have been initiated as declaration under S6 was filed by the landowners.

b) Again, exemption was given by the government based on the request of the land owner himself who asked for it based on his agreement with the society. There were no conditions in the order dated 17-09-1987 that provided for dilution of obligation on any ground. Voluntary agreement between two legal parties was used to seek exemption from the Government under Section 20(1)(a). Government trusted the agreement as genuine and legal and therefore considered it as a sound enough ground to satisfy the requirements of Section 20(1)(a).

Therefore Government cannot be asked to bind itself for not taking action under law with the result of a subsequent civil dispute and that too, without being involved in the same. The obligation of fulfilling condition number 1 of the G.O lies with the land owner and in case he failed to do so for whatever reason, condition no.13 becomes operational automatically.

(iii) Condition at serial No.1 of the order dated 17-09-1987 states the following-

"1. ಸದರಿ ಭೂಮಿಯನ್ನು ತೋಹಿದ ಗೃಹ ನಿರ್ಮಾಣ ಸಹಕಾರ ಸಂಘ ನಿಯಮಿತ, ಹುಬ್ಬಳ್ಳಿ ಇವರಿಗೆ ಮಾರಾಟ ಮಾಡತಕ್ಕದ್ದು ಹಾಗೂ ಮಾರಾಟ ವ್ಯವಹಾರವನ್ನು ಈ ಆದೇಶದ ದಿನಾಂಕದಿಂದ ಆರು ತಿಂಗಳೊಳಗೆ ಪೂರ್ಣಗೊಳಿಸತಕ್ಕದ್ದು"

a) Since this condition was not fulfilled within the specified time period of 6 months, vide order dated 12-05-1988. The Government partially modified the above condition at Sl.No.1 and provided further period of one year from the time previous time limit of 6 months expired i.e. one year from 17-03-1988, which would be till 17.03.1989. This was further enhanced by another one year vide order dated 21-03-1989 till 17-03-1990. Another order was passed in 1993 where the time limit for meeting condition at Sl.No.1 was

- Regularized from 17-03-1990 to 31-03-1992.
- Time limit was extended by two years from the date of the order (31-03-1992), which would mean till 31-03-1994.

Subsequently, time extension for fulfilling at Sl.No.1 was neither sought for nor granted.

b) In all these orders, extension was granted on specific request of the land owner wherein time required for conversion and for change of land use was given as a ground for seeking the same. Change of land use was obtained on 06-02-1992 and conversion of land to non-agricultural was obtained on 13-09-1992. For some inexplicable reason, the land owner neither applied for further extension of time beyond 31-03-1994 nor brought up any reasons for not doing so to the notice of the Government.

Even if is considered year of repeal i.e.1999, this default period on part of landowner is of 5 years. This conduct is also a relevant fact for consideration in order to examine the effect of repeal of Act.

(iv) Further it is clear that acquisition was not initiated under Section 10 immediately after expiry of the last extension of time given to the land owner that is immediately after 31-03-1994. And that is sought to estoppel government from initiating action now as the Act is repealed since then.

a) A legally critical fact that needs to be examined here is whether the Government could have initiated action under Section 10 considering that a civil suit was pending? Though government was not a party to the same, pendency of such a suit would have prohibited the government from initiating action under Section 10. In which case, considering that the said suit went on till 2008 and the Act was repealed in between the period when the suit was still pending and which would have prevented government from initiating acquisition under Section 10 when the Act was still alive, action as per Section 6 of General Clauses Act is possible to be initiated now.

b) The extension order passed on 31-03-1992 regularized extension of the previous period between 17-03-1990 till 31-03-1992. The Government did not pass any order on 17-03-1990 when the then last extension period expired but did so after a lapse of two years on 31-03-1992. Though there was no extension of time existing between 17-03-1990 till 31-03-1992, land owners claimed continuation of their right for exemption under Section 20 (1) (a) as seen from the fact that they applied for and obtained ratification/ regularization of extension for a previous period by the Government.

This order implies acceptance of the power of the government to ratify a decision in post-dated manner or to do something that it did not do when it was supposed to do so, subsequently. This also supports that stand that just as rights did not get expired on account of not passing extension order in time, it obviously meant

that liabilities also continued irrespective of the fact that extension was not granted in time but regularized subsequently. That being so it cannot be stated that Government's right to initiate action against Section 10 does not exist now only because it was not done immediately after 31-03-1994. Considering that the Repeal of an Act does not affect the rights and liabilities created or existing under it and that fact government has powers to initiate post-dated action should ideally allow for that.

In view of the above facts & legal position, whenever the acquisition process under section 10 of the Urban Land (Ceiling & Regulation) Act 1976 had not been initiated, but orders of the exemption had been issued under 20(1)(a) of the Act, then, such a situation would not preclude initiation of process under section 10 of the Act in view of section 6 of Mysore General Clauses Act 1899.

Therefore, after careful consideration and detailed examination of all aspects of the matter and for the reasons explained above, Government are pleased to order as follows:-

GOVERNMENT ORDER NO.UDD 28 ULC 2009, BANGALORE, DATED. 03-04-2012.

Acquisition process u/s 10 of the Urban Land (Ceiling and Regulation) Act, 1976 had not been initiated and possession of the lands had not been taken over by the Government, but, orders of exemption in respect of land bearing at R.S.No.7, 5A3B/1 and 5A/3B/2 – total extent of 27 acres 5 guntas of surplus land owned by Chandrashekrappa.G.Sullad and others, situated in Bommapura Village, Hubli Taluk, issued u/s 20(1)(a) of the ULC Act 1976 vide Government order No.HUD 49 UEH 86, dated. 17-09-1987, such a situation would not preclude initiation of process u/s 10 of the Act, in view of Section 6 of Mysore General Clauses Act 1899.

Accordingly, the Deputy Commissioner, Dharwad is directed to initiate action for acquisition of land under section 10 of the ULC Act 1976.

By orders and in the name of the Governor of Karnataka

S. CHANDRAPPA,

Under Secretary to Government

PR No. 1187

Urban Development Department

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ :– ಶ್ರೀ ಟಿ. ಕೆ. ರಾಣೋಜಿರಾವ್ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಗುಲಬರ್ಗಾ, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸುವ ಬಗ್ಗೆ.

ಓದಲಾಗಿದೆ :– 1) ಸರ್ಕಾರಿ ಪತ್ರ ಸಂಖ್ಯೆ:ವಾಕೈ 74 ಐಎನ್‌ಡಿ 2005 ದಿನಾಂಕ: 25.04.2009.

2) ಕಾರಣ ಕೇಳುವ ನೋಟಿಸು ಸಂಖ್ಯೆ:ಸಿಐ 74 ಐಎನ್‌ಡಿ 2005 ದಿನಾಂಕ: 20.02.2010 26.07.2010 ಮತ್ತು ದಿ:31.08.2010.

3) ಕಾರಣ ಕೇಳುವ ನೋಟಿಸು ಸಂಖ್ಯೆ:ಸಿಐ 74 ಐಎನ್‌ಡಿ 2005 ದಿನಾಂಕ: 14.12.2011

4) ಅಧಿಕಾರಿಯವರ ಪತ್ರ ಸಂಖ್ಯೆ: ಗು/ಜಿಕೈಕೇ/ಟಿ.ಕೆ.ರಾ/ಆ.ದಾ/2011–12/2898 ದಿನಾಂಕ: 06.01.2012

ಪ್ರಸ್ತಾವನೆ:–

ಶ್ರೀ ಟಿ. ಕೆ. ರಾಣೋಜಿರಾವ್, ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಗುಲಬರ್ಗಾ ಇವರು ಸರ್ಕಾರಕ್ಕೆ ಸಲ್ಲಿಸಿದ ಆಸ್ತಿ ಮತ್ತು ದಾಯಿತ್ವ ವಿವರಗಳ ತ;ಖ್ತೆಗಳಿಗೆ ಸಂಬಂಧಿಸಿದಂತೆ ಮಾಹಿತಿಯನ್ನು ಹಾಗೂ ಒದಗಿಸುವಂತೆ ಹಾಗೂ ಸರ್ಕಾರಕ್ಕೆ ಸಲ್ಲಿಸದೇ ಇರುವ ಆಸ್ತಿ ಮತ್ತು ದಾಯಿತ್ವ ತ:ಖ್ತೆಗಳನ್ನು ಒದಗಿಸುವಂತೆ ಉಲ್ಲೇಖ (1) ಪತ್ರದಲ್ಲಿ ಹಾಗೂ ಹಲವಾರು ಪತ್ರಗಳಲ್ಲಿ ಕೋರಲಾಗಿತ್ತು. ಅಧಿಕಾರಿಯವರು ಸದರಿ ಮಾಹಿತಿ/ವಿವರಗಳನ್ನು ಒದಗಿಸದೇ ಇದ್ದ ಕಾರಣ ಉಲ್ಲೇಖ (2) ರಲ್ಲಿ ಕಾರಣ ಕೇಳುವ ನೋಟಿಸ್‌ಗಳನ್ನು ಜಾರಿಗೊಳಿಸಲಾಗಿತ್ತು ಸದರಿ ನೋಟಿಸಿಗಳಿಗೆ ಅಧಿಕಾರಿಯವರು ಯಾವುದೇ ಉತ್ತರ/ಹೇಳಿಕೆಯನ್ನು ವಿವರಗಳನ್ನು ಒದಗಿಸದೇ ಇದ್ದ ಕಾರಣ, ಉಲ್ಲೇಖ (3) ರನ್ವಯ ಕಾರಣ ಕೇಳುವ ನೋಟಿಸಿನೊಂದಿಗೆ ಅನುಬಂಧ 1–4ನ್ನು ಜಾರಿಗೊಳಿಸಿ 15 ದಿನಗಳೊಳಾಗಿ ವಿವರಣೆಯನ್ನು ನೀಡುವಂತೆ ತಪ್ಪಿದಲ್ಲಿ ನಿಯಮಾವಳಿ ರೀತ್ಯ ಮುಂದಿನ ಕ್ರಮ ಕೈಗೊಳ್ಳಲಾಗುವುದೆಂದು ಅಧಿಕಾರಿಯವರಿಗೆ ತಿಳಿಸಲಾಗಿತ್ತು,

ಉಲ್ಲೇಖ(3) ರ ನೋಟಿಸಿಗೆ ಸದರಿ ಅಧಿಕಾರಿಯವರು ಉಲ್ಲೇಖ (4) ರ ಪತ್ರದೊಂದಿಗೆ ಕೆಲವು ಆಸ್ತಿ ಮತ್ತು ದಾಯಿತ್ವ ತ:ಖ್ತೆಗಳನ್ನು ಮಾತ್ರ ಸಲ್ಲಿಸಿದ್ದು, ಪರಿಪೂರ್ಣವಾದ ಮಾಹಿತಿ/ವಿವರಗಳನ್ನು ಸಲ್ಲಿಸಿರುವುದಿಲ್ಲ ಹಾಗೂ ಉಲ್ಲೇಖ (3)ರ ನೋಟೀಸ್‌ಗೆ ಯಾವುದೇ ಸಮಂಜಸವಾದ ಉತ್ತರವನ್ನು ನೀಡಿರುವುದಿಲ್ಲ.

ಸರ್ಕಾರವು ಸದರಿ ಅಧಿಕಾರಿಯವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ಸಿಐ 74 ಐಎನ್‌ಡಿ 2005. ಬೆಂಗಳೂರು, ದಿನಾಂಕ: 03.04.2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಶ್ರೀ ಟಿ. ಕೆ. ರಾಣೋಜಿರಾವ್ ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ, ಗುಲಬರ್ಗಾ, ಇವರು ಸರ್ಕಾರದಿಂದ ಕೋರಿರುವ ಮಾಹಿತಿ/ವಿವರಗಳನ್ನು ನಿಗಧಿತ ಅವಧಿಯಲ್ಲಿ ಸರ್ಕಾರಕ್ಕೆ ಸಲ್ಲಿಸದೇ ಇರುವುದು ಕರ್ನಾಟಕ ಸಿವಿಲ್ ಸೇವಾ (ನಡತೆ) ನಿಯಮಾವಳಿ 1966ರ ನಿಯಮ 3 (i) (ii) (iii) ರ ನಿಯಮಗಳನ್ನು ಉಲ್ಲಂಘಿಸಿದ್ದು, ಈ ಉಲ್ಲಂಘನೆಯನ್ನು ದುರ್ನಡತೆ ಎಂದು ಪರಿಗಣಿಸಿ ಸದರಿ ಅಧಿಕಾರಿಯವರ ವಿರುದ್ಧ ಕೆ.ಸಿ.ಎಸ್. (ಸಿಸಿಎ) ನಿಯಮಾವಳಿ 1957 ರ ನಿಯಮ 11 ರಡಿಯಲ್ಲಿ ಇಲಾಖಾ ವಿಚಾರಣೆ ನಡೆಸಲು "ಶ್ರೀ ಎನ್.ನಾರಾಯಣ, ನಿವೃತ್ತ **ಜಿಲ್ಲಾ ನ್ಯಾಯಾಧೀಶರು, ನಂ.236, 3ಇ ಕ್ರಾಸ್, 3ನೇ ಮುಖ್ಯರಸ್ತೆ, ಕಲ್ಯಾಣ ನಗರ ಬೆಂಗಳೂರು–560043, ಇವರನ್ನು ವಿಚಾರಣಾಧಿಕಾರಿಯನ್ನಾಗಿ** ಹಾಗೂ ಅದೇ ನಿಯಮದಡಿ ಶಿಸ್ತು ಪ್ರಾಧಿಕಾರದ ಪರವಾಗಿ ಪ್ರಕರಣವನ್ನು ವಿಚಾರಣಾಧಿಕಾರಿಗಳ ಮುಂದೆ ಮಂಡಿಸಲು **ಉಪ ನಿರ್ದೇಶಕರು (ಆಡಳಿತ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಕೇಂದ್ರ ಕಛೇರಿ, ಬೆಂಗಳೂರು,** ಇವರನ್ನು ಮಂಡನಾಧಿಕಾರಿಯನ್ನಾಗಿ ನೇಮಕ ಮಾಡಿದೆ.

ವಿಚಾರಣಾಧಿಕಾರಿಗಳು ವಿಚಾರಣೆಯನ್ನು ಕೈಗಾರಿಕಾಭಿವೃದ್ಧಿ ಆಯುಕ್ತರ ಕಛೇರಿಯಲ್ಲಿ ಅಥವಾ ಅವರು ಗುರುತಿಸಿ ನಿಗದಿಪಡಿಸುವ ಸ್ಥಳದಲ್ಲಿ ನಡೆಸತಕ್ಕದ್ದು. ಈ ಉದ್ದೇಶಕ್ಕಾಗಿ ಲಭ್ಯವಿರುವ ಶೀಘ್ರಲಿಪಿಗಾರರು/ ಬೆರಳಚ್ಚುಗಾರರ ಸಹಾಯವನ್ನು ಮತ್ತು ಲೇಖನ ಸಾಮಾಗ್ರಿಗಳನ್ನು ಒದಗಿಸಲು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಗೆ ಸೂಚಿಸಲಾಗಿದೆ.

ವಿಚಾರಣಾಧಿಕಾರಿಗಳು ಮೂರು ತಿಂಗಳೊಳಗಾಗಿ ವಿಚಾರಣೆಯನ್ನು ಪೂರೈಸಿ ವಿಚಾರಣಾ ವರದಿಯನ್ನು ಶಿಸ್ತು ಪ್ರಾಧಿಕಾರಕ್ಕೆ ಸಲ್ಲಿಸುವಂತೆ ಆದೇಶಿಸಿದೆ. ಸರ್ಕಾರಿ ಆದೇಶ ಸಂಖ್ಯೆ: **ಸಿಆಸುಇ 6 ಸೇಇವಿ 2010 ದಿ:28.04.2011** ರನ್ವಯ ವಿಚಾರಣಾಧಿಕಾರಿ ಮತ್ತು ಮಂಡನಾಧಿಕಾರಿಗಳು ಸಂಭಾವನೆಯನ್ನು ಪಡೆಯಲು ಅರ್ಹರಾಗಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಲ್.ಎಸ್. ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು)

ಪಿ.ಆರ್. ನಂ. 1200

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ :– ಶ್ರೀ ಸುಭಾಶ್‌ಚಂದ್ರ ಪಾಟೀಲ್, ಕೈಗಾರಿಕಾ ವಿಸ್ತರಣಾಧಿಕಾರಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ಬಿಜಾಪುರ ಇವರ ಅರ್ಹತಾಪೂರ್ವ ಅವಧಿಯನ್ನು ವಿಸ್ತರಿಸಿರುವ ಬಗ್ಗೆ.

ಓದಲಾಗಿದೆ :– ಪತ್ರ ಸಂಖ್ಯೆ: ಆಡಳಿತ ಸಿಬ್ಬಂದಿ ಇ2/81/2011–12 ದಿ: 24.10.2011.

ಪ್ರಸ್ತಾವನೆ:

ಮೇಲೆ ಓದಲಾದ ಪತ್ರದಲ್ಲಿ ಶ್ರೀ ಸುಭಾಶ್‌ಚಂದ್ರ ಪಾಟೀಲ್, ಇವರು ರಾಮದುರ್ಗ, ಬೆಳಗಾವಿ ಜಿಲ್ಲೆ, ಇಲ್ಲಿ ಕೈಗಾರಿಕಾ ವಿಸ್ತರಣಾಧಿಕಾರಿ ಹುದ್ದೆಯಲ್ಲಿ ದಿ:22.06.2007ರ ಪೂರ್ವಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದು, ಇವರಿಗೆ ಅರ್ಹತಾ ಪೂರ್ವ ಅವಧಿ 21.06.2009 ರವರೆಗೆ ನಿಯಮಾನುಸಾರ ಅವಧಿ ಇದ್ದು, ಹಾಗೂ ಸದರಿ ನೌಕರರು ನಿಗಧಿಪಡಿಸಿರುವ ಪರೀಕ್ಷೆಗಳಲ್ಲಿ ಉತ್ತೀರ್ಣರಾಗದೆ ಇರುವುದರಿಂದ ಇಲಾಖಾ ಮುಖ್ಯಸ್ಥರು, ಕೈಗಾರಿಕೆ ಮತ್ತು ವಾಣಿಜ್ಯ ನಿರ್ದೇಶನಾಲಯದ ಕಛೇರಿ ಆದೇಶ ಸಂಖ್ಯೆ: ಆಡಳಿತ/ಸಿಬ್ಬಂದಿ/ಇ2/12/2010–11 ದಿ:06.05.2010 ರಲ್ಲಿ ಕೆ.ಸಿ.ಎಸ್. (ಪ್ರೊಬೇಷನ್) ನಿಯಮಗಳು 1977ರ ನಿಯಮ 4(i) (ii) ರನ್ವಯ ಇವರ ಅರ್ಹತಾ ಪೂರ್ವ ಅವಧಿಯನ್ನು ದಿ:22.06.2009 ರಿಂದ 21.06.2010 ರವರೆಗೆ ಅನ್ವಯಿಸುವಂತೆ ಒಂದು ವರ್ಷದವರೆಗೆ ವಿಸ್ತರಿಸಿ ಆದೇಶಿಸಿರುತ್ತಾರೆ.

ಸದರಿಯವರು ಇಲಾಖೆ ಪರೀಕ್ಷೆಯಾದ ಕೋ–ಆಪರೇಷನ್ ಪರೀಕ್ಷೆಯನ್ನು ದಿ:30.11.2007 ರಲ್ಲಿ ಉತ್ತೀರ್ಣರಾಗಿದ್ದು, ಹಾಗೂ ಕನ್ನಡ ಭಾಷಾ ಪರೀಕ್ಷೆಯಲ್ಲಿ ವಿನಾಯಿತಿ ಪಡೆದಿದ್ದು, ಅಕೌಂಟ್ಸ್ ಹೈಯರ್ ಪರೀಕ್ಷೆಯನ್ನು ಡಿಸೆಂಬರ್ 2010ರ ಸೆಷನ್‌ನಲ್ಲಿ ತೆಗೆದುಕೊಂಡಿದ್ದು, ಸದರಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಿದ್ದು, ಅದರ ಫಲಿತಾಂಶವು ಕರ್ನಾಟಕ ರಾಜ್ಯ ಪತ್ರ ದಿ:14.04.2011 ರಲ್ಲಿ ಪ್ರಕಟವಾಗಿರುತ್ತದೆ. ಸದರಿ ನೌಕರರ ವಿರುದ್ಧ ಇದುವರೆವಿಗೂ ಇಲಾಖೆಯಲ್ಲಿ ಇಲಾಖಾ ವಿಚಾರಣೆ, ನ್ಯಾಯಾಂಗ ವಿಚಾರಣೆ ಮತ್ತು ಕ್ರಿಮಿನಲ್ ಮೊಕದ್ದಮೆ ಯಾವುದೂ ಇರುವುದಿಲ್ಲ ಎಂದು ತಿಳಿಸಿ, ಸದರಿ ನೌಕರರ ಮೂರು ವರ್ಷಗಳ ವಿಶೇಷ ಕಾರ್ಯನಿರ್ವಹಣಾ ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿ, ಶ್ರೀ ಸುಭಾಶ್‌ಚಂದ್ರ ಪಾಟೀಲ್, ಕೈಗಾರಿಕಾ ವಿಸ್ತರಣಾಧಿಕಾರಿ,

ಬಿಜಾಪುರ, ಇವರ ಅರ್ಹತಾಪೂರ್ವ ಅವಧಿಯನ್ನು ದಿ:22.06.2010 ರಿಂದ 14.04.2011ರವರೆಗೆ ವಿಸ್ತರಿಸಿ ಆದೇಶಿಸಲು ಅಪರ ನಿರ್ದೇಶಕರು, (ಆಡಳಿತ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ರವರು ಸರ್ಕಾರವನ್ನು ಕೋರಿರುತ್ತಾರೆ.

ಸರ್ಕಾರವು ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 189 ಕೈಸೇವಿ 2011 ಬೆಂಗಳೂರು, ದಿನಾಂಕ: 03.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಶ್ರೀ ಸುಭಾಶ್‌ಚಂದ್ರ ಪಾಟೀಲ್, ಕೈಗಾರಿಕಾ ವಿಸ್ತರಣಾಧಿಕಾರಿ, ಬಿಜಾಪುರ, ಇವರಿಗೆ ಕೆ.ಸಿ.ಎಸ್. (ಪ್ರೊಬೇಷನ್) ನಿಯಮಗಳು 1977ರ ನಿಯಮ 4(i) ರನ್ವಯ ಇವರ ಅರ್ಹತಾ ಪೂರ್ವ ಅವಧಿಯನ್ನು ದಿ:22.06.2010 ರಿಂದ 14.04.2011 ರವರೆಗೆ ವಿಸ್ತರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಾಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಎಲ್.ಎಸ್. ವಾಸನ್
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು)

ಪಿ.ಆರ್. ನಂ. 1201

ವಾಣಿಜ್ಯ ಮತ್ತು ಕೈಗಾರಿಕೆ ಸಚಿವಾಲಯ

ವಿಷಯ :– **ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ ಕಟ್ಟಡದಲ್ಲಿ ಖಾಲಿಯಿರುವ ಕೊಠಡಿಗಳನ್ನು ಕಾವಾ ಸಂಸ್ಥೆಯ ಉಪಯೋಗಕ್ಕೆ ನೀಡಿರುವುದನ್ನು ಮುಂದುವರೆಸುವ ಬಗ್ಗೆ.**

ಓದಲಾಗಿದೆ:–
1. ಸರ್ಕಾರಿ ಆದೇಶ ಸಂಖ್ಯೆ: ವಾಕೈ 04 ಕೈಯೋವಿ 2007, ದಿ:04.10.2007.
2. ಸರ್ಕಾರಿ ಆದೇಶ ಸಂಖ್ಯೆ: ವಾಕೈ 18 ಕೈಯೋವಿ 2010, ದಿ:11.11.2010.
3. ಅಧಿಕ ನಿರ್ದೇಶಕರು, ಜಿಕೈಕೇ ರವರ ಪತ್ರ ಸಂಖ್ಯೆ: ಜಿಕೈಕೇ/ಸಿ2/ಸಿಐಟಿ/ಕಾವಾ/108/2010–11, ದಿ:22.02.2012.

ಪ್ರಸ್ತಾವನೆ:

ಮೇಲೆ ಓದಲಾದ (2)ರ ಆದೇಶದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ (ಸಿ.ಟಿ.ಐ.)ಯ ಕಟ್ಟಡದಲ್ಲಿನ ಮೂರು ಕೊಠಡಿಗಳನ್ನು ಮೇಲೆ ಓದಲಾದ (1) ರ ಸರ್ಕಾರಿ ಆದೇಶದಲ್ಲಿನ ಷರತ್ತಿಗೊಳಪಟ್ಟು 2 ವರ್ಷಗಳ ಅವಧಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿರುವ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ (ಕಾವಾ) ಸಂಸ್ಥೆಯ ತರಬೇತಿಗಳ ಉಪಯೋಗಕ್ಕಾಗಿ ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲು ಸರ್ಕಾರದ ಅನುಮತಿಯನ್ನು ನೀಡಿರುವುದನ್ನು ಮುಂದುವರೆಸಿ, ದಿನಾಂಕ:04.10.2009 ರಿಂದ 2 ವರ್ಷಗಳ ಅವಧಿಗೆ ಉಪಯೋಗಿಸಿಕೊಳ್ಳಲು ಸರ್ಕಾರದ ಅನುಮತಿ ನೀಡಿದೆ.

ಮೇಲೆ ಓದಲಾದ (3)ರ ಪತ್ರದಲ್ಲಿ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ, ಮೈಸೂರು, ರವರಿಗೆ ಸ್ವಂತ ಭೂಮಿ ಹಾಗೂ ರೂ.5.00 ಕೋಟಿ ಅನುದಾನ ಮಂಜೂರಾಗಿದ್ದು ಈ ಪೈಕಿ ರೂ.1.50 ಕೋಟಿ ಈಗಾಗಲೇ ಬಿಡುಗಡೆಯಾಗಿ ಕಟ್ಟಡ ನಿರ್ಮಾಣ ಕಾರ್ಯವನ್ನು ಲೋಕೋಪಯೋಗಿ ಇಲಾಖೆಗೆ ವಹಿಸಿದ್ದು ಸಂಸ್ಥೆಯ ಕಟ್ಟಡ ನಿರ್ಮಾಣ ಕಾರ್ಯ ಪೂರ್ಣಗೊಳ್ಳುವವರೆಗೆ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ, ಮೈಸೂರು, ಇಲ್ಲಿನ ಮೂರು ಕೊಠಡಿಗಳನ್ನು ವಿಸ್ತರಿಸುವಂತೆ ದಿ: 16.09.2011ರ ಪತ್ರದಲ್ಲಿ ಕೋರಿರುವ ಮೇರೆಗೆ ಸದರಿ ವಿದ್ಯಾ ಸಂಸ್ಥೆಗೆ ಸರ್ಕಾರಿ ಆದೇಶ ದಿನಾಂಕ: 11.11.2010ರನ್ವಯ ನೀಡಿರುವ ಮೂರು ಕೊಠಡಿಗಳ ಅವಧಿಯು 04.10.2011ಕ್ಕೆ ಕೊನೆಗೊಂಡಿದ್ದು ಆದುದರಿಂದ ಡೀನ್ ಚಾಮರಾಜೇಂದ್ರ ದೃಶ್ಯಕಲಾ ಅಕಾಡೆಮಿ, ಮೈಸೂರು, ಇವರಿಗೆ ತಮ್ಮದೇ ಕಟ್ಟಡ ನಿರ್ಮಾಣವಾಗುವವರೆಗೆ ದಿ: 04.10.2011 ರಿಂದ 03.10.2013 ರವರೆಗೆ ಸಿ.ಟಿ.ಐನ ಮೂರು ಕೊಠಡಿಗಳನ್ನು ವಿಸ್ತರಿಸಿ ಸರ್ಕಾರದ ಆದೇಶವನ್ನು ನೀಡುವಂತೆ ಅಪರ ನಿರ್ದೇಶಕರು (ಜಿಕೈಕೇ) ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ, ರವರು ಕೋರಿರುವರು.

ಪ್ರಸ್ತಾವನೆಯನ್ನು ಸರ್ಕಾರವು ಕೂಲಂಕಷವಾಗಿ ಪರಿಶೀಲಿಸಿ, ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ: ವಾಕೈ 10 ಕೈಯೋವಿ 2011, ಬೆಂಗಳೂರು, ದಿನಾಂಕ:05.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ, ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವ್ಯಾಪ್ತಿಯಲ್ಲಿನ ಮೈಸೂರಿನ ಚಾಮರಾಜೇಂದ್ರ ತಾಂತ್ರಿಕ ಸಂಸ್ಥೆ (ಸಿ.ಟಿ.ಐ.)ಯ ಕಟ್ಟಡದಲ್ಲಿನ ಮೂರು ಕೊಠಡಿಗಳನ್ನು ಈಗಾಗಲೇ ಮೇಲೆ ಓದಲಾದ (1 ಮತ್ತು 2) ರ ಸರ್ಕಾರಿ ಆದೇಶದಲ್ಲಿನ ಷರತ್ತಿಗೊಳಪಟ್ಟು ದಿ:04.10.2011 ರಿಂದ 03.10.2013ರ ವರೆಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಅಧೀನದಲ್ಲಿರುವ ಚಾಮರಾಜೇಂದ್ರ

ದೃಶ್ಯಕಲಾ ಅಕಾಡೆಮಿ (ಕಾವಾ) ಸಂಸ್ಥೆಯ ತರಬೇತಿಗಳ ಉಪಯೋಗಕ್ಕಾಗಿ ತಾತ್ಕಾಲಿಕವಾಗಿ ಉಪಯೋಗಿಸಿಕೊಳ್ಳಲು ಸರ್ಕಾರದ ಅನುಮತಿ ನೀಡಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಲ್.ಎಸ್. ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ

ಪಿ.ಆರ್. ನಂ. 1202 ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು)

ಕಂದಾಯ ಸಚಿವಾಲಯ

ವಿಷಯ : ಶ್ರೀ ಸುಲ್ತಾನ್ ಮಹಮೂದ್, ಹಿಂದಿನ ತಹಶೀಲ್ದಾರ್, ಜಗಳೂರು ತಾಲ್ಲೂಕು, ದಾವಣಗೆರೆ ಜಿಲ್ಲೆ, ಹಾಲಿ ತಹಶೀಲ್ದಾರ್ ಸುರಪುರ ತಾಲ್ಲೂಕು, ಯಾದಗಿರಿ ಜಿಲ್ಲೆ ಹಾಗೂ ಇತರೆ ನೌಕರರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ವಿಚಾರಣಾಧಿಕಾರಿ ಹಾಗೂ ಮಂಡನಾಧಿಕಾರಿ ನೇಮಿಸುವ ಕುರಿತು ಆದೇಶ.

ಓದಲಾಗಿದೆ : 1) ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು, ಇವರ ಪತ್ರ ಸಂಖ್ಯೆ:ಸಿಸಿಎ.ವಿವ/28/10/11, ದಿನಾಂಕ:04/11/2010.

2) ಸರ್ಕಾರದ ಕಾರಣ ಕೇಳುವ ನೋಟೀಸ್ ಸಂಖ್ಯೆ:ಆರ್‌ಡಿ 73 ಎಡಿಇ 2010, ದಿನಾಂಕ:21/04/2011.

3) ಶ್ರೀ ಸುಲ್ತಾನ್ ಮಹಮೂದ್, ತಹಶೀಲ್ದಾರ್ ಸುರಪುರ ತಾಲ್ಲೂಕು, ಅವರ ಲಿಖಿತ ಹೇಳಿಕೆ ದಿನಾಂಕ:09/02/2011. ಶ್ರೀ ಎಸ್.ಎ.ಮನ್ಸೂರ್, ತಾಲ್ಲೂಕು, ಶಿರಸ್ತೇದಾರ್, ಜಗಳೂರು ಮತ್ತು ಶ್ರೀ ಜಬಿಉಲ್ಲಾ ಪ್ರಥಮ ದರ್ಜೆ ಸಹಾಯಕರು ಅವರುಗಳ ಲಿಖಿತ ಹೇಳಿಕೆ

ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ:04/11/2010ರ ಪತ್ರದಲ್ಲಿ, 1).ಶ್ರೀ ಸುಲ್ತಾನ್ ಮಹಮೂದ್, ಹಿಂದಿನ ತಹಶೀಲ್ದಾರ್, ಜಗಳೂರು ತಾಲ್ಲೂಕು, ಚಿತ್ರದುರ್ಗ, ಪ್ರಸ್ತುತ ನಿವೃತ್ತರು 2). ಶ್ರೀ ಎಸ್.ಎ.ಮನ್ಸೂರ್, ತಾಲ್ಲೂಕು ಶಿರಸ್ತೇದಾರ್, ತಾಲ್ಲೂಕು ಕಛೇರಿ ಜಗಳೂರು ಹಾಗೂ 3). ಶ್ರೀ ಜಬೀಉಲ್ಲಾ, ಪ್ರಥಮ ದರ್ಜೆ ಸಹಾಯಕ, ತಾಲ್ಲೂಕು ಕಛೇರಿ, ಜಗಳೂರು, ಅವರುಗಳು ಕಾಸಗೋಡು ಗ್ರಾಮದ ಸರ್ವೆ ನಂ.75/3ರಲ್ಲಿ 06–27ಎಕರೆ ಜಮೀನನ್ನು ಅವರ ಅಧಿಕಾರ ವ್ಯಾಪ್ತಿ ಮೀರಿ ಸುಮಾರು 70ವರ್ಷಗಳ ನಂತರ ಸರ್ಕಾರಿ ಫಡಾದಿಂದ ಖಾತೆ ರೆಸ್ಟೋರ್ ಮಾಡಿ ನಿಯಮಕ್ಕೆ ವಿರುದ್ಧವಾಗಿ ಆದೇಶಿಸಿರುವುದಾಗಿ ಪ್ರಾದೇಶಿಕ ಆಯುಕ್ತರು ವರದಿ ಮಾಡುತ್ತಾ, ಸದರಿ ಆರೋಪಿತ ಅಧಿಕಾರಿ ಮತ್ತು ನೌಕರರ ವಿರುದ್ಧ ಕರಡು ಆರೋಪ ಪಟ್ಟಿ ಹಾಗೂ ಸಂಬಂಧಪಟ್ಟ ದಾಖಲೆಗಳನ್ನು ಮೂಲ ಕಡತದೊಂದಿಗೆ ಜಿಲ್ಲಾಧಿಕಾರಿ, ದಾವಣಗೆರೆ ಅವರ ಪತ್ರ ಸಂಖ್ಯೆ:ಸಿಸಿಎ(2)/ಸಿಆರ್/1/2010–11, ದಿನಾಂಕ:24/08/2010ರಲ್ಲಿ ಸಲ್ಲಿಸಿರುತ್ತಾರೆ. ಆ ಹಿನ್ನೆಲೆಯಲ್ಲಿ, ಶ್ರೀ ಸುಲ್ತಾನ್ ಮಹಮೂದ್, ತಹಶೀಲ್ದಾರ್ ರವರನ್ನು ಒಳಗೊಂಡಂತೆ, ಇತರ ಇಬ್ಬರ ವಿರುದ್ದ ನಿಯಮ 13ರಡಿ ಜಂಟಿ ಇಲಾಖಾ ವಿಚಾರಣೆಯನ್ನು ಜರುಗಿಸುವ ಬಗ್ಗೆ ಅಗತ್ಯ ಕ್ರಮ ಕೈಗೊಳ್ಳಲು ಕೈಗೊಳ್ಳುವಂತೆ ಕೋರಿರುತ್ತಾರೆ.

ಆ ಹಿನ್ನಲೆಯಲ್ಲಿ, ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ:21/04/2011 ರಲ್ಲಿ ಆರೋಪಿತ ಅಧಿಕಾರಿ ಹಾಗೂ ನೌಕರರಿಗೆ ಕಾರಣ ಕೇಳುವ ನೋಟೀಸನ್ನು ಜಾರಿ ಮಾಡಿ ಸರ್ಕಾರಕ್ಕೆ ಸ್ವೀಕೃತಿ ನೀಡುವಂತೆ ಜಿಲ್ಲಾಧಿಕಾರಿ, ದಾವಣಗೆರೆ ಅವರನ್ನು ಕೋರಲಾಗಿರುತ್ತದೆ.

ಮೇಲೆ ಓದಲಾದ ಕ್ರ.ಸಂ.(3) ರಲ್ಲಿ ಶ್ರೀ ಸುಲ್ತಾನ್ ಮೊಹಮೂದ್, ತಹಶೀಲ್ದಾರ್, (ನಿವೃತ್ತರು) ಇವರು ಮತ್ತು ಶ್ರೀ ಎಸ್.ಎ.ಮನ್ಸೂರ್ ತಾಲ್ಲೂಕು ಶಿರಸ್ತೇದಾರ್, ಜಗಳೂರು ಹಾಗೂ ಜಬಿಉಲ್ಲಾ ಪ್ರಥಮ ದರ್ಜೆ ಸಹಾಯಕ, ತಾಲ್ಲೂಕು ಕಛೇರಿ, ಜಗಳೂರು ತಾಲ್ಲೂಕು ಇವರುಗಳು ತಮ್ಮ ಲಿಖಿತ ಹೇಳಿಕೆಯಲ್ಲಿ ಅವರ ಮೇಲೆ ಹೊರಿಸಿರುವ ಆರೋಪಗಳು ನಿರಾಧಾರವಾಗಿದ್ದು ಆರೋಪಗಳನ್ನು ಕೈಬಿಡುವಂತೆ ಕೋರಿರುತ್ತಾರೆ.

ಆದುದರಿಂದ, ದೋಷಾರೋಪಣೆಗಳನ್ನು ವಿವರಿಸುವ ಸತ್ಯಾಸತ್ಯತೆಗಳನ್ನು ಪರಿಶೀಲಿಸಲು ವಿಚಾರಣೆ ನಡೆಸಲು ಅವಶ್ಯವಾಗಿದ್ದು ಅವರುಗಳ ವಿರುದ್ದ ಜಂಟಿ ಇಲಾಖಾ ವಿಚಾರಣೆ ನಡೆಸುವ ಬಗ್ಗೆ ನಿವೃತ್ತ ನ್ಯಾಯಾಧೀಶರಾದ ಶ್ರೀ ಡಿ.ವಿ.ಶೇಟ್ ಅವರನ್ನು ವಿಚಾರಣಾಧಿಕಾರಿಗಳನ್ನಾಗಿ ಹಾಗೂ ಜಗಳೂರು ತಾಲ್ಲೂಕು ತಹಶೀಲ್ದಾರ್‌ನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಲು ಸರ್ಕಾರವು ನಿರ್ಧರಿಸಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ:ಅರ್‌ಡಿ 73 ಎಡಿಇ 2010, ಬೆಂಗಳೂರು, ದಿನಾಂಕ:11/04/2012.

ಪ್ರಸ್ತಾವನೆಯಲ್ಲಿ, ವಿವರಿಸಿರುವ ಕಾರಣಗಳಿಂದಾಗಿ, 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11(ಎ) ಮತ್ತು 13 ರಲ್ಲಿ ಪ್ರದತ್ತವಾದ ಅಧಿಕಾರ ಚಲಾಯಿಸಿ, ಸರ್ಕಾರವು ಸುಲ್ತಾನ್ ಮೊಹಮೂದ್, ತಹಶೀಲ್ದಾರ್, ಸುರಪುರ (ಪ್ರಸ್ತುತ ನಿವೃತ್ತರು) ಅವರು ಹಾಗೂ ಶ್ರೀ ಎಸ್.ಎ.ಮನ್ಸೂರ್ ತಾಲ್ಲೂಕು ಶಿರಸ್ತೇದಾರ್, ಜಗಳೂರು ಹಾಗೂ ಜಬಿಉಲ್ಲಾ ಪ್ರಥಮ ದರ್ಜೆ ಸಹಾಯಕ, ತಾಲ್ಲೂಕು ಕಛೇರಿ, ಜಗಳೂರು ತಾಲ್ಲೂಕು ಅವರುಗಳ ವಿರುದ್ಧ ಜಂಟಿ ಇಲಾಖಾ ವಿಚಾರಣೆ ನಡೆಸಲು ನಿವೃತ್ತ ನ್ಯಾಯಾಧೀಶರಾದ ಶ್ರೀ ಡಿ.ವಿ.ಶೇಟ್, ಧಾರವಾಡ ಅವರನ್ನು ವಿಚಾರಣಾಧಿಕಾರಿಯನ್ನಾಗಿ ಮತ್ತು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11(5)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಜಗಳೂರು ತಾಲ್ಲೂಕಿನ ತಹಶೀಲ್ದಾರರನ್ನು ಮಂಡನಾಧಿಕಾರಿಯನ್ನಾಗಿ ನೇಮಿಸಿದೆ.

ವಿಚಾರಣಾಧಿಕಾರಿ, ಈ ಪ್ರಕರಣದ ವಿಚಾರಣೆಯನ್ನು ಜಿಲ್ಲಾಧಿಕಾರಿ, ದಾವಣಗೆರೆ ಅವರ ಕಛೇರಿ ಆವರಣದಲ್ಲಿ ಅಥವಾ ಅವರು ಗುರುತಿಸಿ ನಿಗಧಿ ಪಡಿಸಿದ ಸ್ಥಳದಲ್ಲಿ ನಡೆಸತಕ್ಕದ್ದು, ಈ ಉದ್ದೇಶಕ್ಕಾಗಿ ಲಭ್ಯವಿರುವ ಕಛೇರಿಗಳಲ್ಲಿ ವಿಚಾರಣಾಧಿಕಾರಿಗಳಿಗೆ ಸ್ಥಳಾವಕಾಶವನ್ನು ಕಲ್ಪಿಸುವುದು ಹಾಗೂ ಸಂಬಂಧಿಸಿದ ಕಛೇರಿಯಲ್ಲಿ ಲಭ್ಯವಿರುವ ಶೀಘ್ರಲಿಪಿಗಾರರ/ಬೆರಳಚ್ಚುಗಾರರ ಸಹಾಯವನ್ನು ಹಾಗೂ ಲೇಖನ ಸಾಮಾಗ್ರಿಗಳನ್ನು ಜಿಲ್ಲಾಧಿಕಾರಿ, ದಾವಣಗೆರೆ ಅವರು ಒದಗಿಸತಕ್ಕದ್ದು.

ಈ ಪ್ರಕರಣದ ವಿಚಾರಣೆಗಾಗಿ ವಿಚಾರಣಾಧಿಕಾರಿಗಳಿಗೆ ಸರ್ಕಾರದ ಆದೇಶ ಸಂಖ್ಯೆ:ಸಿಆಸುಇ 06 ಸೇಇವಿ 2010, ಬೆಂಗಳೂರು, ದಿನಾಂಕ:28/04/2011 ರನ್ವಯ ರೂ.15,000(ಹದಿನೈದು ಸಾವಿರ ರೂಪಾಯಿಗಳು ಮಾತ್ರ) ಸಂಭಾವನೆ (ವಾಹನ ಭತ್ಯೆಯೂ ಸೇರಿರುತ್ತದೆ) ಮಂಡನಾಧಿಕಾರಿಗೆ ವಿಚಾರಣೆಯ ದಿನವೊಂದಕ್ಕೆ ರೂ.400/- (ನಾಲ್ಕುನೂರು) ಸಂಭಾವನೆಯನ್ನು ಜಿಲ್ಲಾಧಿಕಾರಿ, ದಾವಣಗೆರೆ ಅವರು ಪಾವತಿ ಮಾಡತಕ್ಕದ್ದು.

ವಿಚಾರಣಾಧಿಕಾರಿ ಅವರು ಇಲಾಖಾ ವಿಚಾರಣೆಯನ್ನು 1957ರ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳ ನಿಯಮ 11 ಮತ್ತು 11(ಎ) ರಲ್ಲಿನ ವಿಧಿವಿಧಾನಗಳನ್ನು ಅನುಸರಿಸಿ, ಜರುಗಿಸಿ, ವಿಚಾರಣಾ ವರದಿಯನ್ನು ಮೂರು ತಿಂಗಳೊಳಗಾಗಿ ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಬಿ.ವಿ.ರಾಮಲಿಂಗಯ್ಯ

ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. ನಂ. 1211 ಕಂದಾಯ ಇಲಾಖೆ (ಸೇವೆಗಳು-3).

ಕಂದಾಯ ಸಚಿವಾಲಯ

ವಿಷಯ :- 2011-12ನೇ ಸಾಲಿನಲ್ಲಿ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ, ತುರ್ತು ಪರಿಹಾರ ಕ್ರಮ ಕೈಗೊಳ್ಳಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :- ದಿನಾಂಕ: 03-04-2012ರಂದು ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ವೀಡಿಯೋ ಸಂವಾದ.

ಪ್ರಸ್ತಾವನೆ :

2011-12ನೇ ಸಾಲಿನಲ್ಲಿ ಮುಂಗಾರು ಮಳೆವಿಫಲವಾಗಿ, ರಾಜ್ಯದ 24 ಜಿಲ್ಲೆಗಳ 123 ತಾಲ್ಲೂಕುಗಳಲ್ಲಿ ಬರ ಪರಿಸ್ಥಿತಿ ಉಂಟಾಗಿರುತ್ತದೆ. ಬರ ಪರಿಸ್ಥಿತಿಯನ್ನು ಎದುರಿಸಲು ಕುಡಿಯುವ ನೀರು ಸರಬರಾಜು, ಜಾನುವಾರುಗಳಿಗೆ ಮೇವುಒದಗಿಸುವ ಮತ್ತು ಜಾನುವಾರು ಸಂರಕ್ಷಣೆ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುತ್ತದೆ. ಆದ್ದರಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಯನ್ನು ನಿಭಾಯಿಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಉಲ್ಲೇಖಿತ ವಿಡಿಯೋ ಸಂವಾದದಲ್ಲಿ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನಲೆಯಲ್ಲಿ, ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿಯನ್ನು ನಿಭಾಯಿಸಲು ರಾಜ್ಯ ವಿಪತ್ತು, ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 149 ಟಿಎನ್‌ಆರ್ 2012, (1)ಬೆಂಗಳೂರು, ದಿನಾಂಕ: 13-04-2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ,ಮುಂಗಾರು ಮಳೆಯ ಕೊರತೆಯಿಂದ ರಾಜ್ಯದಲ್ಲಿ ಉಂಟಾಗಿರುವ ಬರ ಪರಿಸ್ಥಿತಿಗೆ ಸಂಬಂಧಿಸಿದಂತೆ ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆ	ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ)
1.	ಧಾರವಾಡ	300.00
2.	ಚಿಕ್ಕಮಗಳೂರು	300.00
3.	ಚಿಕ್ಕಬಳ್ಳಾಪುರ	500.00
	ಒಟ್ಟು	1100.00

(ರೂಪಾಯಿ ಒಂದು ಸಾವಿರದ ಒಂದು ನೂರು ಲಕ್ಷಗಳು ಮಾತ್ರ)

1) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ಅನುದಾನವನ್ನು ವೆಚ್ಚ ಮಾಡುವುದು.

2) ಈ ಆದೇಶದಲ್ಲಿ ಬಿಡುಗಡೆ ಮಾಡಿದ ಅನುದಾನವನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಸಮಾಲೋಚಿಸಿ

ಅ) ಕುಡಿಯುವ ನೀರಿನ ವ್ಯವಸ್ಥೆ, ಹಾಗೂ

ಆ) ಜಾನುವಾರುಗಳ ಸಂರಕ್ಷಣೆಗಾಗಿ ಮಾತ್ರ ಅನುದಾನವನ್ನು ಬಳಸುವುದು.

3) ಜಿಲ್ಲಾ ಉಸ್ತುವಾರಿ ಸಚಿವರುಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳು ಹಾಗೂ ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿರವರುಗಳು ಆಯಾ ಜಿಲ್ಲಾ ಸಚಿವರೊಡನೆ ನಿಕಟ ಸಂಪರ್ಕವಿರಿಸಿಕೊಂಡು ಸಭೆಗಳನ್ನು ಆಯೋಜಿಸಲು ಕ್ರಮ ವಹಿಸುವುದು.

4) ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾ ಮಟ್ಟದ ಸಭೆಗಳನ್ನು ತಿಂಗಳಿಗೊಮ್ಮೆ ನಡೆಸಿ ಬರಪರಿಸ್ಥಿತಿಯ ಬಗ್ಗೆ ಅವಲೋಕನ ಮಾಡುವುದು ಮತ್ತು ಸರ್ಕಾರದಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರು, ಜಾನುವಾರು ಸಂರಕ್ಷಣೆ ಮತ್ತು ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವತಿಯಿಂದ ಮಂಜೂರಾಗಿರುವ ಅನುದಾನವನ್ನು ಕುಡಿಯುವ ನೀರಿನ ಯೋಜನೆಗಳು, ಕೊಳವೆ ಬಾವಿ ತೆರೆಯುವುದು ಹಾಗೂ ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಸಾಧಿಸುವ ಪ್ರಗತಿಯನ್ನು ವಿಶೇಷವಾಗಿ ಪರಿಶೀಲಿಸುವುದು. ಪ್ರತಿ ತಿಂಗಳ 5ನೇ ತಾರೀಖಿನೊಳಗೆ ಸಭೆಗಳ ನಡೆವಳಿಗಳನ್ನು ಸರ್ಕಾರಕ್ಕೆ ಸಲ್ಲಿಸುವುದು.

5) ಪ್ರತಿ ತಾಲ್ಲೂಕಿನಲ್ಲಿ ಶಾಸಕರ ಅಧ್ಯಕ್ಷತೆಯಲ್ಲಿ ಬರಪರಿಹಾರ ಕಾಮಗಾರಿಗಳಿಗೆ ಸಂಬಂಧಿಸಿದಂತೆ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯನ್ನೂ ಸೇರಿಸಿದಂತೆ ಕ್ರಿಯಾ ಯೋಜನೆಗಳನ್ನು ಸಿದ್ಧಪಡಿಸಿ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ಸಭೆ ಕರೆದು ಸಿದ್ಧಪಡಿಸಿದ ಹಾಗೂ ಅನುಮೋದಿಸಿದ ಕಾರ್ಯ ಯೋಜನೆಗಳನ್ನು ಯುದ್ಧೋಪಾದಿಯಲ್ಲಿ ಜಾರಿಗೊಳಿಸುವುದು.

6) ಬರಪೀಡಿತ ಪ್ರದೇಶಗಳಿಗೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ವ್ಯಾಪಕವಾಗಿ ಪ್ರವಾಸ ಮಾಡುವುದು ಹಾಗೂ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರು ಹಾಗೂ ಜಾನುವಾರುಗಳಿಗೆ ಸಂಬಂಧಪಟ್ಟ ಸಮಸ್ಯೆಗಳು ಉದ್ಭವವಾಗದಂತೆ ನೋಡಿಕೊಳ್ಳುವುದು. ಬರಪೀಡಿತ ಪ್ರದೇಶದಲ್ಲಿ ಜನರು ಗುಳೇ ಹೋಗುವುದನ್ನು ತಡೆಗಟ್ಟಲು ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತರಿ ಯೋಜನೆಯಡಿ ಕಾಮಗಾರಿಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಬೇಡಿಕೆಗನುಗುಣವಾಗಿ ಅನುಷ್ಠಾನಗೊಳಿಸುವುದು.

7) ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸಲು ತಾಲ್ಲೂಕಿಗೊಂದು ಸಹಾಯವಾಣಿಯನ್ನು ಸ್ಥಾಪಿಸಿ, ತಾಂತ್ರಿಕ ಸಿಬ್ಬಂದಿಯನ್ನು ನಿಯೋಜಿಸಿ 24 ಗಂಟೆಯೊಳಗಾಗಿ ಕುಡಿಯುವ ನೀರಿನ ಸಮಸ್ಯೆಗಳನ್ನು ಬಗೆಹರಿಸುವುದು.

8) ಪ್ರತಿ 15 ದಿನಗಳಿಗೊಮ್ಮೆ ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಜಂಟಿಯಾಗಿ ಬರ ಪರಿಹಾರ ಕಾಮಗಾರಿಗಳ ಬಗ್ಗೆ ಪತ್ರಿಕಾ ಗೋಷ್ಠಿ ನಡೆಸಿ ಮಾಧ್ಯಮಗಳಿಗೆ ಜಿಲ್ಲೆಯಲ್ಲಿ ಕೈಗೊಂಡಿರುವ ಕುಡಿಯುವ ನೀರು, ಜಾನುವಾರು ಸಂರಕ್ಷಣೆ, ಉದ್ಯೋಗ ಖಾತರಿ ಯೋಜನೆ ಮತ್ತು ಬರಪರಿಹಾರಕ್ಕೆ ಸಂಬಂಧಿಸಿದಂತೆ ಸಾಧಿಸಿರುವ ಪ್ರಗತಿಯ ಚಿತ್ರಣವನ್ನು ಬಿಂಬಿಸುವುದು. ಪತ್ರಿಕಾಗೋಷ್ಠಿಯಲ್ಲಿ ಸಿದ್ಧಪಡಿಸಿದ ಟಿಪ್ಪಣಿಯನ್ನು ಇ–ಮೇಲ್ ಮುಖಾಂತರ ಸರ್ಕಾರಕ್ಕೆ ರವಾನಿಸುವುದು. ಇ–ಮೇಲ್ ವಿಳಾಸ secyrelief-rev@karnataka.gov.in.

9) ಪ್ರತಿ ಹೋಬಳಿಗೆ ಒಬ್ಬ ಜಿಲ್ಲಾ ಮಟ್ಟದ ನೋಡಲ್ ಅಧಿಕಾರಿಯನ್ನು ನೇಮಿಸಿ ಅವರ ಮೂಲಕ ಬರಪರಿಹಾರ ಕಾಮಗಾರಿಗಳು, ಜಾನುವಾರು ಸಂರಕ್ಷಣೆ ಮತ್ತು ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ನಿರ್ವಹಿಸಲಾಗುತ್ತಿರುವ ಕಾಮಗಾರಿಗಳನ್ನು ವ್ಯಾಪಕವಾಗಿ ಪರಿಶೀಲನೆ ಮಾಡುವುದು.

10) ಮುಂದಿನ 2 ತಿಂಗಳುಗಳ ಕಾಲ ಕುಡಿಯುವ ನೀರು/ ಮೇವಿನ ಕೊರತೆ ಹಾಗೂ ಉದ್ಯೋಗಕ್ಕೆ ಕೊರತೆಯುಂಟಾಗದಂತೆ ಹಾಗೂ ಯಾವುದೇ ದೂರುಗಳು ಬರದಂತೆ ಕಾರ್ಯ ನಿರ್ವಹಿಸುವುದು.

11) ಪ್ರತಿಯೊಂದು ಕಾಮಗಾರಿಯ ಆರಂಭ, ಚಾಲ್ತಿಯಲ್ಲಿರುವ ಹಾಗೂ ಮುಕ್ತಾಯದ ಹಂತಗಳ ಛಾಯಾ ಚಿತ್ರಗಳನ್ನು ದಾಖಲಿಸಿ, ಮೂರನೇ ಹಂತದ ಪರಿವೀಕ್ಷಣೆಗೆ ಒಳಪಡಿಸಿ, ಅಂತಿಮ ಬಿಲ್ ಪಾವತಿ ಮಾಡುವುದು

12) ಪೂರ್ಣಗೊಂಡ ಪ್ರತಿಯೊಂದು ಕಾಮಗಾರಿಯ ಛಾಯಾ ಚಿತ್ರಗಳು ಹಾಗೂ ವೆಚ್ಚದ ವಿವರಗಳನ್ನು ಇ–ಮೇಲ್ ಮುಖಾಂತರ (secyrelief-rev@karnataka.gov.in) ಕಳುಹಿಸುವುದು.

13) ಪ್ರತಿಯೊಂದು ಕಾಮಗಾರಿಯ ವಿವರಗಳನ್ನು ಫಲಕದಲ್ಲಿ ಸಾರ್ವಜನಿಕರಿಗೆ ಕಾಣುವಂತೆ ಈ ಕೆಳಕಂಡ ಮಾದರಿಯಲ್ಲಿ ನಮೂದಿಸುವುದು.

ಕರ್ನಾಟಕ ಸರ್ಕಾರ

ಪ್ರಕೃತಿ ವಿಕೋಪ ಕಾಮಗಾರಿ

ಕಾಮಗಾರಿಯ ಹೆಸರು:	
ಅಂದಾಜು ಮೊತ್ತ:	
ಕಾಮಗಾರಿ ಪ್ರಾರಂಭಿಸಿದ ದಿನಾಂಕ:	
ಕಾಮಗಾರಿ ಮುಕ್ತಾಯವಾದ ದಿನಾಂಕ:	
ಅನುಷ್ಠಾನಗೊಳಿಸಿದ ಸಂಸ್ಥೆ:	

14) ಪ್ರತಿ ತಿಂಗಳು ಅಂತ್ಯಕ್ಕೆ ಅನುದಾನ ಬಳಕೆಯಾದ ವಿವರಗಳನ್ನು ಮೇಲ್ಕಂಡ ಇ-ಮೇಲ್ ಮುಖಾಂತರ ಸಲ್ಲಿಸುವುದು. ಬಳಕೆ ಪ್ರಮಾಣ ಪತ್ರಗಳನ್ನೂ ಸಹ ತಪ್ಪದೇ ಸರ್ಕಾರಕ್ಕೆ ರವಾನಿಸುವುದು.

15) ಪ್ರತಿ ತಿಂಗಳು ಸಾಧಿಸಿದ ಪ್ರಗತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಹಾಗೂ ಪ್ರಾದೇಶಿಕ ಆಯುಕ್ತರ ಗಮನಕ್ಕೆ ತರುವುದು ಮತ್ತು ಅವರಿಂದ ಸಲಹೆ-ಸೂಚನೆಗಳನ್ನು ಪಡೆಯುವುದು.

16) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ ಎನ್.ಡಿ.ಆರ್.ಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳಿಸುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ 2012-13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245—01-102-0-00 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ: FD-392, Exp-7/2012, Dt: 05-04-2012 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎಂ.ಆನಂದಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ
(ವಿಪತ್ತು ನಿರ್ವಹಣೆ ಮತ್ತು ಸೇವೆಗಳು-2).

ಪಿ.ಆರ್. ನಂ. 1212

ಕಂದಾಯ ಸಚಿವಾಲಯ

ವಿಷಯ :- 2011-12ನೇ ಸಾಲಿನಲ್ಲಿ ರಾಜ್ಯದಲ್ಲಿ ಬೇಸಿಗೆ ಹಿನ್ನಲೆಯಲ್ಲಿ, ಕುಡಿಯುವ ನೀರು ಪೂರೈಸಲು ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವ ಬಗ್ಗೆ.

ಓದಲಾಗಿದೆ :- ದಿನಾಂಕ: 03-04-2012ರಂದು ಮಾನ್ಯ ಮುಖ್ಯಮಂತ್ರಿಗಳು ಜಿಲ್ಲಾಧಿಕಾರಿಗಳೊಂದಿಗೆ ನಡೆಸಿದ ವೀಡಿಯೋ ಸಂವಾದ.

ಪ್ರಸ್ತಾವನೆ :

2011-12ನೇ ಸಾಲಿನಲ್ಲಿ ರಾಜ್ಯದಲ್ಲಿ ಬೇಸಿಗೆ ಇರುವುದರಿಂದ, ಮುಂದಿನ ದಿನಗಳಲ್ಲಿ ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲು, ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡುವಂತೆ ಉಲ್ಲೇಖಿತ ವಿಡಿಯೋ ಸಂವಾದದಲ್ಲಿ ಬೇಡಿಕೆ ಸಲ್ಲಿಸಿರುತ್ತಾರೆ. ಈ ಹಿನ್ನೆಲೆಯಲ್ಲಿ, ಕುಡಿಯುವ ನೀರಿನ ಪೂರೈಕೆಗಾಗಿ ರಾಜ್ಯ ವಿಪತ್ತು, ಪರಿಹಾರ ನಿಧಿಯಿಂದ ಅನುದಾನ ಬಿಡುಗಡೆ ಮಾಡಲು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಕಂಇ 149 ಟಿಎನ್‌ಆರ್ 2012, (2) ಬೆಂಗಳೂರು, ದಿನಾಂಕ: 13–04–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೇಸಿಗೆಯಲ್ಲಿ, ಜನ, ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ಉಂಟಾಗದಂತೆ, ಮುಂಜಾಗ್ರತ ಕ್ರಮ ಕೈಗೊಳ್ಳಲು, ರಾಜ್ಯ ವಿಪತ್ತು ಪರಿಹಾರ ನಿಧಿಯಿಂದ ಈ ಕೆಳಕಂಡಂತೆ ಜಿಲ್ಲೆಗಳ ಜಿಲ್ಲಾಧಿಕಾರಿಗಳಿಗೆ ಅನುದಾನ ಬಿಡುಗಡೆ ಮಾಡಲು ಮಂಜೂರಾತಿ ನೀಡಲಾಗಿದೆ.

ಕ್ರ. ಸಂ.	ಜಿಲ್ಲೆ	ಬಿಡುಗಡೆ ಮಾಡಿದ ಅನುದಾನ (ರೂ.ಲಕ್ಷಗಳಲ್ಲಿ)
1.	ದಕ್ಷಿಣ ಕನ್ನಡ	200.00
2.	ಬೆಂಗಳೂರು ನಗರ	200.00
	ಒಟ್ಟು	400.00

(ರೂಪಾಯಿ ನಾಲ್ಕುನೂರು ಲಕ್ಷಗಳು ಮಾತ್ರ)

1) ಮೇಲಿನಂತೆ ಬಿಡುಗಡೆ ಮಾಡಿದ ಹಣವನ್ನು ಜಿಲ್ಲಾಧಿಕಾರಿಗಳು ಮತ್ತು ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು ಸಮಾಲೋಚಿಸಿ ಈ ಕೆಳಕಂಡಂತೆ ನಿರ್ದೇಶನಗಳಿಗೆ ಒಳಪಟ್ಟು ಅನುದಾನವನ್ನು ಬಳಸುವುದು.

ಅ) ಕುಡಿಯುವ ನೀರಿನ ವ್ಯವಸ್ಥೆ.

ಆ) ಜಾನುವಾರುಗಳ ಸಂರಕ್ಷಣೆ.

2) ಕೇಂದ್ರ ಸರ್ಕಾರವು ಹೊರಡಿಸಿರುವ ಮಾರ್ಗಸೂಚಿಗಳ ಪ್ರಕಾರ ವೆಚ್ಚ ಮಾಡುವುದು.

3) ಅನುದಾನ ಲಭ್ಯತೆ ಇಲ್ಲದೇ ಯಾವುದೇ ದುರಸ್ತಿ ಕಾಮಗಾರಿಗಳನ್ನು ಎಸ್.ಡಿ.ಆರ್.ಎಫ್/ ಎನ್‌ಸಿಸಿಎಫ್ ಅಡಿಯಲ್ಲಿ ಕೈಗೊಳ್ಳುವಂತಿಲ್ಲ. ಹಾಗೂ ಕಾಮಗಾರಿಗಳನ್ನು ಬಿಡುಗಡೆಯಾದ ಅನುದಾನಕ್ಕೆ ಸೀಮಿತಗೊಳುಸುವುದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ ಜಿಲ್ಲೆಯ ಜಿಲ್ಲಾಧಿಕಾರಿಗಳು ಪೇಯೀಸ್ ರಸೀದಿ ಬಿಲ್ಲುಗಳನ್ನು ತಯಾರಿಸಿ ಮೇಲು ರುಜು ಮಾಡಿ ಜಿಲ್ಲಾ ಖಜಾನೆಯಿಂದ ಡ್ರಾ ಮಾಡಿ ಎಸ್.ಡಿ.ಆರ್.ಎಫ್ ಖಾತೆಗೆ ಜಮಾ ಮಾಡಿದ ನಂತರ ಪರಿಹಾರ ಕಾರ್ಯಗಳಿಗೆ ಉಪಯೋಗಿಸತಕ್ಕದ್ದು.

ಮೇಲಿನಂತೆ ಬಿಡುಗಡೆ ಮಾಡಿರುವ ಅನುದಾನವನ್ನು ಸಂಬಂಧಪಟ್ಟ 2012–13ನೇ ಸಾಲಿನ ಆಯವ್ಯಯ ಲೆಕ್ಕ ಶೀರ್ಷಿಕೆ 2245–01–102–0–00 (ಯೋಜನೇತರ) ಅಡಿಯಲ್ಲಿ ಭರಿಸತಕ್ಕದ್ದು.

ಅನುದಾನ ವೆಚ್ಚ ಮಾಡುವಾಗ ಸರ್ಕಾರವು ಕಾಲಕಾಲಕ್ಕೆ ಹೊರಡಿಸಿರುವ ಮಾರ್ಗಸೂಚಿ/ಆದೇಶ/ ಸುತ್ತೋಲೆಗಳನ್ನು ಪಾಲಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂ:FD–392, Exp–7/2012, Dt: 05–04–2012 ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಸ್.ಎಂ. ಆನಂದಪ್ಪ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ

ಪಿ.ಆರ್. ನಂ. 1213 (ವಿಪತ್ತು ನಿರ್ವಹಣೆ ಮತ್ತು ಸೇವೆಗಳು–2).

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಚಿತ್ರಾಪು ಗ್ರಾಮದ ಶೇಡಿಕಟ್ಟ ಎಂಬಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ: ಮುಸದ/ ತಾಂಸ–5– ಸ.ಇಂ. –11/ ದ.ಕ.ಜಿ/ ಮಂ.ತಾ/ ಶೇಡಿಕಟ್ಟೆ/ ಇಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/1254, ದಿನಾಂಕ 27.03.2012.

ಪ್ರಸ್ತಾವನೆ:

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಚಿತ್ರಾಪು ಗ್ರಾಮದ ಶೇಡಿಕಟ್ಟ ಎಂಬಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ.47.00ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ 3ನೇ ಬಾರಿಗೆ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	06.02.2012
ಉದಯವಾಣಿ ಮತ್ತು ಕರಾವಳಿ ಅಲೆ ದಿನ ಪತ್ರಿಕೆ	19.02.2012

ದಿನಾಂಕ 13.03.2012ರಂದು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 46,33,419/–
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 46,61,842/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಗಣೇಶ್ ಪುತ್ರನ್, 1ನೇ ದರ್ಜೆ ಗುತ್ತಿಗೆದಾರರು	57,91,807/–	25.00 ಹೆಚ್ಚು	24.2386 ಹೆಚ್ಚು

ಮೇಲ್ಕಂಡಂತೆ ಶ್ರೀ ಗಣೇಶ್ ಪುತ್ರನ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 24.2386 ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ **ಶೇ.14.00%** ಹೆಚ್ಚಿನ ದರಗಳಿಗೆ ಅಂದರೆ ರೂ. 53,14,500/– ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 56 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಚಿತ್ರಾಪು ಗ್ರಾಮದ ಶೇಡಿಕಟ್ಟ ಎಂಬಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 46,61,842/–ಗಳ ಮೇಲೆ ಶೇ. 14.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 53,14,500/–ಗಳಿಗೆ (ರೂ ಐವತ್ತ ಮೂರು ಲಕ್ಷ ಹದಿನಾಲ್ಕು ಸಾವಿರದ ಐದು ನೂರು ರೂಪಾಯಿಗಳು ಮಾತ್ರ) ಶ್ರೀ ಗಣೇಶ್ ಪುತ್ರನ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

1. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
2. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಪಿ.ಆರ್. ನಂ. 1227

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಚಿತ್ರಾಪು ಗ್ರಾಮದ ಗಜನಿ ಎಂಬಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ: ಮುಸದ/ ತಾಂಸ–5– ಸ.ಇಂ. –11/ ದ.ಕ.ಜಿ/ ಮಂ.ತಾ/ ಗಜನಿ/ ಇಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/1215, ದಿನಾಂಕ 21.03.2012.

ಪ್ರಸ್ತಾವನೆ:

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಚಿತ್ರಾಪು ಗ್ರಾಮದ ಗಜನಿ ಎಂಬಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ.49.00ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ 2ನೇ ಬಾರಿಗೆ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	06.02.2012
ಉದಯವಾಣಿ ಮತ್ತು ಕರಾವಳಿ ಅಲೆ ದಿನ ಪತ್ರಿಕೆ	19.02.2012

ದಿನಾಂಕ 13.03.2012ರಂದು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 47,52,252/–
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 47,81,380/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಎ.ಬಾಲಕೃಷ್ಣಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು	55,24,634/–	16.253 ಹೆಚ್ಚು	15.545 ಹೆಚ್ಚು

ಮೇಲ್ಕಂಡಂತೆ ಶ್ರೀ ಎ.ಬಾಲಕೃಷ್ಣಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 15.545 ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ **ಶೇ.14.00%** ಹೆಚ್ಚಿನ ದರಗಳಿಗೆ ಅಂದರೆ ರೂ. 54,50,773/– ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 48 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಚಿತ್ರಾಪು ಗ್ರಾಮದ ಗಜನಿ ಎಂಬಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 47,81,380/–ಗಳ ಮೇಲೆ ಶೇ. 14.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 54,50,773/–ಗಳಿಗೆ (ರೂ ಐವತ್ತ ನಾಲ್ಕು ಲಕ್ಷ ಐವತ್ತು ಸಾವಿರದ ಏಳು ನೂರ ಎಪ್ಪತ್ತ ಮೂರು ರೂಪಾಯಿಗಳು ಮಾತ್ರ) ಶ್ರೀ ಎ.ಬಾಲಕೃಷ್ಣಶೆಟ್ಟಿ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

3. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

4. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. ನಂ. 1235 ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ನರಿಂಗಾನ ಗ್ರಾಮದ ಆಳ್ವರಬೆಟ್ಟು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ: ಮುಸದ/ ತಾಂಸ–5–ಸ.ಇಂ. –11/ ದ.ಕ.ಜಿ/ ಬಂ.ತಾ/ ಬಾಳ್ವರಬೆಟ್ಟು/ ಇಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/1251, ದಿನಾಂಕ 27.03.2012.

ಪ್ರಸ್ತಾವನೆ:

ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ನರಿಂಗಾನ ಗ್ರಾಮದ ಆಳ್ವರಬೆಟ್ಟು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ.25.00ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ 2ನೇ ಬಾರಿಗೆ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	06.02.2012
ಉದಯವಾಣಿ ಮತ್ತು ಕರಾವಳಿ ಅಲೆ ದಿನ ಪತ್ರಿಕೆ	19.02.2012

ದಿನಾಂಕ 13.03.2012ರಂದು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 24,28,035/–
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 24,34,254/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಹೆರಾಲ್ಡ್ ಪಿ.ಮಿರಿಂದಾ, 1ನೇ ದರ್ಜೆ ಗುತ್ತಿಗೆದಾರರು	28,26,898/–	16.427 ಹೆಚ್ಚು	16.1299 ಹೆಚ್ಚು

ಮೇಲ್ಕಂಡಂತೆ ಶ್ರೀ ಹೆರಾಲ್ಡ್ ಪಿ.ಮಿರಿಂದಾ, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 16.1299ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ **ಶೇ.14.00%** ಹೆಚ್ಚಿನ ದರಗಳಿಗೆ ಅಂದರೆ ರೂ. 27,75,050/– ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 53 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಬಂಟ್ವಾಳ ತಾಲ್ಲೂಕು, ನರಿಂಗಾನ ಗ್ರಾಮದ ಆಳ್ವರಬೆಟ್ಟು ಎಂಬಲ್ಲಿ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 24,34,254/–ಗಳ ಮೇಲೆ ಶೇ. 14.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 27,75,050/–ಗಳಿಗೆ (ರೂ ಇಪ್ಪತ್ತ ಏಳು ಲಕ್ಷ ಎಪ್ಪತ್ತೈದು ಸಾವಿರದ ಐವತ್ತು ರೂಪಾಯಿಗಳು ಮಾತ್ರ) ಶ್ರೀ ಹೆರಾಲ್ಡ್ ಪಿ.ಮಿರಿಂದಾ, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

5. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.

6. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. ನಂ. 1236 ಜಲ ಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)

ಜಲಸಂಪನ್ಮೂಲ ಸಚಿವಾಲಯ

ವಿಷಯ : ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಪಾವಂಜೆ ಗ್ರಾಮದ ಗೋಳಿದಡಿ ಎಂಬಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ಟೆಂಡರ್ ಅನುಮೋದನೆ ಬಗ್ಗೆ.

ಓದಲಾಗಿದೆ : ಮುಖ್ಯ ಇಂಜಿನಿಯರ್, ಸಣ್ಣ ನೀರಾವರಿ ದಕ್ಷಿಣ ವಲಯ ಬೆಂಗಳೂರುರವರ ಪತ್ರದ ಸಂಖ್ಯೆ: ಮುಸದ/ ತಾಂಸ–5– ಸ.ಇಂ. –11/ ದ.ಕ.ಜಿ/ ಮಂ.ತಾ/ ಗೋಳಿದಡಿ/ ಇಪ್ರೊಕ್ಯೂರ್‌ಮೆಂಟ್/ಟೆಂಡರ್ ಅನುಮೋದನೆ/2011/1253, ದಿನಾಂಕ 27.03.2012.

ಪ್ರಸ್ತಾವನೆ:

ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಪಾವಂಜೆ ಗ್ರಾಮದ ಗೋಳಿದಡಿ ಎಂಬಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯ ರೂ.45.00ಲಕ್ಷಗಳ ಅಂದಾಜು ಪಟ್ಟಿಗೆ ಅಧೀಕ್ಷಕ ಇಂಜಿನಿಯರ್, ಸಣ್ಣ ನೀರಾವರಿ ವೃತ್ತ, ಮೈಸೂರು ಇವರು ಆಡಳಿತಾತ್ಮಕ ಅನುಮೋದನೆ ಹಾಗೂ ತಾಂತ್ರಿಕ ಮಂಜೂರಾತಿ ನೀಡಿರುತ್ತಾರೆ.

ಈ ಕಾಮಗಾರಿಯನ್ನು ಕೈಗೊಳ್ಳಲು ಮಂಗಳೂರು ಸಣ್ಣ ನೀರಾವರಿ ವಿಭಾಗದಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮದಡಿ ಇ–ಪ್ರೊಕ್ಯೂರ್‌ಮೆಂಟ್ ಮೂಲಕ 2ನೇ ಬಾರಿಗೆ ಕರೆಯಲಾದ ಟೆಂಡರ್‌ನ ಪ್ರಕಟಣೆಯನ್ನು ಕೆಳಕಂಡ ಮಾಧ್ಯಮಗಳಲ್ಲಿ ಪ್ರಕಟಿಸಲಾಗಿದೆ.

ದಕ್ಷಿಣ ಕನ್ನಡ ಜಿಲ್ಲಾ ಟೆಂಡರ್ ಬುಲೆಟಿನ್	06.02.2012
ಉದಯವಾಣಿ ಮತ್ತು ಕರಾವಳಿ ಅಲೆ ದಿನ ಪತ್ರಿಕೆ	19.02.2012

ದಿನಾಂಕ 13.03.2012ರಂದು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಅನ್ನು ತೆರೆಯಲಾಗಿದ್ದು, ಈ ಟೆಂಡರ್ ಪ್ರಕಟಣೆಗೆ ಸ್ಪಂದಿಸಿ ಒಬ್ಬರು ಗುತ್ತಿಗೆದಾರರು ಭಾಗವಹಿಸಿದ್ದು ಇವರ ಟೆಂಡರ್ ಅರ್ಹತೆ ಹೊಂದಿದ್ದು, ವಿವರಗಳು ಕೆಳಕಂಡಂತಿವೆ.

ಮಂಜೂರಾದ ಅಂದಾಜಿನ ದರಗಳಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 43,55,254/–
ಪ್ರಸಕ್ತ ಸಾಲಿನ ದರಪಟ್ಟಿಯ ದರಗಳಿಗೆ ಪರಿಷ್ಕರಿಸಿದಂತೆ ಟೆಂಡರಿಗೆ ಇಡಲಾದ ಮೊತ್ತ				ರೂ. 43,74,852/–
ಕ್ರಮ ಸಂಖ್ಯೆ	ಗುತ್ತಿಗೆದಾರರ ಹೆಸರು ಮತ್ತು ದರ್ಜೆ ಶ್ರೀ/ಮೆಸರ್ಸ್	ಟೆಂಡರ್‌ನಲ್ಲಿ ಗುತ್ತಿಗೆದಾರರು ನಮೂದಿಸಿರುವ ದರಗಳಂತೆ ಟೆಂಡರಿನ ಮೊತ್ತ	ಮಂಜೂರಾದ ಅಂದಾಜಿನ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ	ಪರಿಷ್ಕರಿಸಿದ ದರಗಳ ಮೇಲಿನ ಶೇಕಡಾವಾರು ಹೆಚ್ಚಳ/ಕಡಿಮೆ
1	ಗಣೇಶ್ ಪುತ್ರನ್, 1ನೇ ದರ್ಜೆ ಗುತ್ತಿಗೆದಾರರು	54,47,713/–	25.084 ಹೆಚ್ಚು	24.52 ಹೆಚ್ಚು

ಮೇಲ್ಕಂಡಂತೆ ಶ್ರೀ ಗಣೇಶ್ ಪುತ್ರನ್, 1ನೇ ದರ್ಜೆ ಗುತ್ತಿಗೆದಾರರು ಇವರು ಟೆಂಡರ್‌ನಲ್ಲಿ ಅರ್ಹತೆ ಹೊಂದಿದ ಗುತ್ತಿಗೆದಾರರಾಗಿದ್ದು ಇವರು ನಮೂದಿಸಿದ ದರಗಳನ್ನು ಪ್ರಸಕ್ತ ಸಾಲಿನ ದರಗಳಿಗೆ ಪರಿಷ್ಕರಿಸಿದ ಟೆಂಡರ್‌ಗಿಟ್ಟ ಮೊತ್ತಕ್ಕೆ ಹೋಲಿಸಿದಾಗ ಶೇಕಡ 24.52ರಷ್ಟು ಹೆಚ್ಚಾಗಿರುತ್ತದೆ. ಸದರಿ ಟೆಂಡರನ್ನು ಸರ್ಕಾರದಲ್ಲಿ ಪರಿಶೀಲಿಸಿ ಪರಿಷ್ಕೃತ ದರಗಳ ಮೇಲೆ **ಶೇ.14.00%** ಹೆಚ್ಚಿನ ದರಗಳಿಗೆ ಅಂದರೆ ರೂ. 49,87,331/– ಗಳಿಗೆ ಟೆಂಡರನ್ನು ಅನುಮೋದಿಸಲು ಪರಿಗಣಿಸಿದೆ.

ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಸರ್ಕಾರವು ಈ ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಸನೀಇ 55 ಅಪಿಬಂ 2012 (ತಾಂತ್ರಿಕ), ಬೆಂಗಳೂರು, ದಿನಾಂಕ: 13ನೇ ಏಪ್ರಿಲ್ 2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಪಾವಂಜೆ ಗ್ರಾಮದ ಗೋಳಿದಡಿ ಎಂಬಲ್ಲಿ ಉಪ್ಪು ನೀರು ತಡೆ ಕಿಂಡಿ ಅಣೆಕಟ್ಟು ನಿರ್ಮಾಣ ಕಾಮಗಾರಿಯನ್ನು ಪ್ರಸಕ್ತ ಸಾಲಿನ ದರಪಟ್ಟಿಯ ದರಗಳನ್ನು ಪರಿಗಣಿಸಿ ಪರಿಷ್ಕರಿಸಿದಂತೆ ಟೆಂಡರಿಗಿಟ್ಟ ಪರಿಷ್ಕೃತ ಮೊತ್ತ ರೂ. 43,74,852/–ಗಳ ಮೇಲೆ ಶೇ. 14.00ರಷ್ಟು ಹೆಚ್ಚಿನ ದರದಲ್ಲಿ ಅಂದರೆ ರೂ. 49,87,331/–ಗಳಿಗೆ (ರೂ ನಲವತ್ತೊಂಬತ್ತು ಲಕ್ಷ ಎಂಬತ್ತೇಳು ಸಾವಿರದ ಮೂರು ನೂರ ಮುವತ್ತೊಂದು ರೂಪಾಯಿಗಳು ಮಾತ್ರ) ಶ್ರೀ ಗಣೇಶ್ ಪುತ್ರನ್, 1ನೇ ದರ್ಜೆ ಗುತ್ತಿಗೆದಾರರಿಗೆ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ವಹಿಸಲು ಸರ್ಕಾರವು ಅನುಮೋದನೆ ನೀಡಿದೆ.

7. ಕಾಮಗಾರಿಯನ್ನು ನಿಗಧಿತ ಅವಧಿಯಲ್ಲಿ ಪೂರ್ಣಗೊಳಿಸತಕ್ಕದ್ದು.
8. ಸರ್ಕಾರದ ಅನುಮತಿ ಪಡೆಯದೆ ಕಾಮಗಾರಿಯಲ್ಲಿ ಯಾವುದೇ ಹೆಚ್ಚುವರಿ ಕೆಲಸ ನಿರ್ವಹಿಸಬಾರದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 2002, ದಿನಾಂಕ:20/01/2003ರಲ್ಲಿ ಇಲಾಖಾ ಕಾರ್ಯದರ್ಶಿಯವರಿಗೆ ನೀಡಿರುವ ಆರ್ಥಿಕಾಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ರುದ್ರಮೂರ್ತಿ

ಪದನಿಮಿತ್ತ ಸರ್ಕಾರದ ಅಧೀನ ಕಾರ್ಯದರ್ಶಿ,

ಪಿ.ಆರ್. ನಂ. 1237 ಜಲ ಸಂಪನ್ಮೂಲ ಇಲಾಖೆ(ಸಣ್ಣ ನೀರಾವರಿ)

ಒಳಾಡಳಿತ ಸಚಿವಾಲಯ

ವಿಷಯ: ಶ್ರೀ ಸಿ.ಪಿ. ನವೀನ್, ಪಿ.ಎಸ್.ಐ., ಸರಗೂರು ಪೊಲೀಸ್ ಠಾಣೆ, ಹೆಚ್.ಡಿ. ಕೋಟೆ ಮೈಸೂರು ಜಿಲ್ಲೆ. ಇವರು ಸರ್ಕಾರಕ್ಕೆ ಸಲ್ಲಿಸಿರುವ ಪರಿಷ್ಕರಣ ಮೇಲ್ಮನವಿ ಅರ್ಜಿ ಕುರಿತು ಅಂತಿಮ ಆದೇಶ.

ಓದಲಾಗಿದೆ:

1) ಶಿಸ್ತು ಪ್ರಾಧಿಕಾರ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ಇವರ ಆದೇಶ ಸಂಖ್ಯೆ: ಇವಿ/56/2008–09(ಒಬಿ ಸಂಖ್ಯೆ: 15/2010–11) ದಿನಾಂಕ: 29–10–2010

2) ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು, ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು ಇವರ ಆದೇಶ ಸಂಖ್ಯೆ: ಅಪೀಲು(4)/69/2010–11(ಆ.ಪು. ಸಂಖ್ಯೆ: 10/2011–12) ದಿನಾಂಕ: 04–08–2011

3) ಅರ್ಜಿದಾರರ ಪರಿಷ್ಕರಣ ಮೇಲ್ಮನವಿ ಅರ್ಜಿ ದಿನಾಂಕ: 18–11–2011

4) ಮಹಾ ನಿರ್ದೇಶಕರು ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರ ಪತ್ರ ಸಂಖ್ಯೆ: ಅಪೀಲು(2)54/2011–12 ದಿನಾಂಕ: 01–2–2012

<u>ಪ್ರಸ್ತಾವನೆ:</u>

ಶ್ರೀ ಸಿ.ಪಿ. ನವೀನ್, ಪಿ.ಎಸ್.ಐ., ಇವರು ಮಂಡ್ಯ ಜಿಲ್ಲೆಯ ಅರೆಕೆರೆ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ (ಇನ್ನು ಮುಂದೆ ಅರ್ಜಿದಾರರೆಂದು ಕರೆಯಲ್ಪಡುವ) ಕರ್ತವ್ಯದಲ್ಲಿ ದುರ್ನಡತೆ, ನಿರ್ಲಕ್ಷತೆ ಬೇಜವಾಬ್ದಾರಿತನ ಹಾಗೂ ಕರ್ತವ್ಯಲೋಪವೆಸಗಿದ ಕಾರಣದ ಮೇಲೆ ಇವರ ವಿರುದ್ಧ ಕರ್ನಾಟಕ ರಾಜ್ಯ ಪೊಲೀಸ್ (ಶಿಸ್ತು ನಡವಳಿ) ನಿಯಮಗಳು, 1965ರ ನಿಯಮ 6 ರಡಿ ಇಲಾಖಾ ವಿಚಾರಣೆಗೆ ಆದೇಶಿಸಿ, ಈ ಕೆಳಕಂಡಂತೆ ದೋಷಾರೋಪಣೆಯನ್ನು ಹೊರಿಸಲಾಗಿದೆ.

<u>ದೋಷಾರೋಪಣೆ:–</u>

i. ಆರೋಪಿತ ಪೊಲೀಸ್ ಅಧಿಕಾರಿಯಾದ ನೀವು ಒಬ್ಬ ಜವಾಬ್ದಾರಿಯುತ ಪಿ.ಎಸ್.ಐ., ಆಗಿದ್ದು, ಅರೆಕೆರೆ ಪೊಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ: 89/2008 ಐ.ಪಿ.ಸಿ. ಕಲಂ 379 ಪ್ರಕರಣದಲ್ಲಿ ಶ್ರೀ ಎಂ.ಟಿ. ಕೃಷ್ಣಪ್ಪ, ಮುನಿತಾ ಹೋಟೇಲ್ ಕಾಂಪ್ಲೆಕ್ಸ್,

ಕೆ.ಎಸ್.ಆರ್.ಟಿ.ಸಿ. ಬಸ್ ಸ್ಟ್ಯಾಂಡ್ ಪಕ್ಕ ಎಂ.ಸಿ. ರಸ್ತೆ, ಮಂಡ್ಯ ಜಿಲ್ಲೆ, ರವರು ಟಿ.ವಿ.ಎಸ್. ಮೊಪೆಡ್‌ನ್ನು ಕೊಡದೇ ಇದ್ದ ಕಾರಣ ಅವರೊಂದಿಗೆ ಉದ್ದಟತನದಿಂದ ನಿಯಮಬಾಹಿರವಾಗಿ ವರ್ತಿಸಿರುತ್ತೀರಿ ಹಾಗೂ ಅವರ ಮಗನಾದ ಶ್ರೀ ಎಂ.ಕೆ. ಧನಂಜಯನಿಗೂ ಸಹ ಬಾಯಿಗೆ ಬಂದ ಹಾಗೆ ಬೈದು, ಗಲಾಟೆ ಮಾಡಿ, ಕೈಗೆ ಕೈಕೋಳ ಹಾಕಿ, ಆತನನ್ನು ಎಳೆದುಕೊಂಡು ಮಂಡ್ಯ ಪಶ್ಚಿಮ ಠಾಣೆಗೆ ಕರೆದುಕೊಂಡು ಹೋಗಿ ಅಲ್ಲಿ ಆತನ ಮೊಬೈಲ್ ಫೋನ್ ಕಿತ್ತುಕೊಂಡು ಅರ್ಜಿದಾರರಾದ ಹಾಗೂ ಶ್ರೀ ಧನಂಜನಯನ ತಂದೆಯಾದ ಶ್ರೀ ಎಂ.ಟಿ. ಕೃಷ್ಣಪ್ಪ ರವರು ತಮ್ಮ ಮಗನನ್ನು ನೋಡಲು ಹೋದಾಗ–ಅವಕಾಶ ನೀಡದೆ ಟಿ.ವಿ.ಎಸ್. ಗಾಡಿಯನ್ನು ತಂದುಕೊಡದಿದ್ದರೆ ನಿಮ್ಮ ಮಗನನ್ನು ಜೈಲಿಗೆ ಕಳುಹಿಸುತ್ತೇನೆಂದು ಹೇಳಿ ಉದ್ದಟತನದಿಂದ ವರ್ತಿಸಿ, ನಿಯಮಬಾಹಿರವಾಗಿ ಕೈಕೋಳ ತೊಡಿಸಿ ಠಾಣೆಗೆ ಕರೆದುಕೊಂಡು ಹೋಗಿ ಘೋರ ದುರ್ನಡತೆ, ಕರ್ತವ್ಯದಲ್ಲಿ ಅಶಿಸ್ತನ್ನು ಮತ್ತು ಕರ್ತವ್ಯಲೋಪ ತೋರ್ಪಡಿಸಿರುತ್ತೀರಿ.

ii. ಆ.ಪೊ.ಅ. ಆದ ತಾವು ಅರೆಕೆರೆ ಪೊಲೀಸ್ ಠಾಣೆಯಲ್ಲಿ ಒಬ್ಬ ಜವಾಬ್ದಾರಿಯುತ ಪಿ.ಎಸ್.ಐ.ಯಾಗಿದ್ದು, ದಿನಾಂಕ 05–07–2008 ಮೊಕದ್ದಮೆ ಸಂ. 89/2008ರಲ್ಲಿ ಸದರಿ ಮೋಟಾರು ವಾಹನ ಕಳುವಾಗಿರುವ ಬಗ್ಗೆ ದೂರು ದಾಖಲಾಗಿದ್ದು, ಸದರಿ ದೂರಿನಲ್ಲಿ ಪಿರ್ಯಾದುದಾರರಾದ ಶ್ರೀ ವಿ. ಗೋಪಿನಾಥ್ ರವರು ದಿ: 25–06–2008 ತಮ್ಮ ಸ್ನೇಹಿತರಾದ ಶ್ರೀ ಎನ್. ಕೃಷ್ಣ ರವರಿಂದ ಅವರ ಸದರಿ ವಾಹನವಾದ ಕೆಎ–04–ಇಕೆ–8939 ಟಿ.ವಿ.ಎಸ್. ಎಕ್ಸ್‌ಎಲ್ ಪಡೆದುಕೊಂಡಿದ್ದು, ಸದರಿ ವಾಹನದಲ್ಲಿ ಅರಕೆರೆಗೆ ಬರುವಾಗ ಪ್ರಾಥಮಿಕ ಆರೋಗ್ಯ ಕೇಂದ್ರದ ಬಳಿ ನಿಲ್ಲಿಸಿ ಅದಕ್ಕೆ ಬೀಗ ಹಾಕುವುದನ್ನು ಮರೆತು ಶೌಚಾಲಯಕ್ಕೆ ಹೋಗಿ ಬರುವಷ್ಟರಲ್ಲಿ ಕಳುವಾಗಿರುತ್ತದೆ ಎಂದು ದೂರನ್ನು ನೀಡಿರುತ್ತಾರೆ ಹಾಗೂ ಸದರಿ ವಾಹನದ ವಾರುಸುದಾರರಾದ ಶ್ರೀ ಎನ್. ಕೃಷ್ಣ ರವರು ಸಹ ದಿನಾಂಕ: 25–06–2008 ರಂದು ಪಿರ್ಯಾದಾರರಾದ ಶ್ರೀ ವಿ. ಗೋಪಿನಾಥ್ ರವರಿಗೆ ವಾಹನವನ್ನು ನೀಡಿರುತ್ತೇನೆ ಎಂದು ಅವರ ಹೇಳಿಕೆಯಲ್ಲಿ ನುಡಿದಿರುತ್ತಾರೆ. ಆದರೆ ಸದರಿ ವಾಹನವು ದಿನಾಂಕ: 11–06–2008 ರಿಂದಲೇ ಸದರಿ ಶ್ರೀ ಎಂ.ಕೆ. ಧನಂಜಯ ರವರ ಪೇ ಅಂಡ್ ಯೂಸ್ ಪಾರ್ಕಿಂಗ್ ನಲ್ಲೆ ಇತ್ತು ಎಂಬುದಾಗಿ ಅವರ ಪಾರ್ಕಿಂಗ್ ನಿರ್ವಹಣೆ ಪುಸ್ತಕದಲ್ಲಿ ನಮೂದು ಇರುತ್ತದೆ. ಆದ್ದರಿಂದ ದಿನಾಂಕ: 11–6–2008 ರಿಂದಲೇ ಸದರಿ ವಾಹನವು ಪಾರ್ಕಿಂಗ್‌ನಲ್ಲಿ ಇದ್ದರೆ ಪಿರ್ಯಾದುದಾರರಾದ ಶ್ರೀ ವಿ. ಗೋಪಿನಾಥ್ ರವರಿಗೆ ಶ್ರೀ ಎನ್ .ಕೃಷ್ಣ ರವರು ದಿನಾಂಕ: 25–06–2008 ರಂದು ವಾಹನವನ್ನು ಕೊಡಲು ಹೇಗೆ ಸಾಧ್ಯ ಎಂಬುದನ್ನು ತಾವು ಪರಿಶೀಲಿಸದೇ ಹಾಗೂ ಸರಿಯಾದ ರೀತಿಯಲ್ಲಿ ತನಿಖೆಯನ್ನು ಮಾಡದೇ ಪಾರ್ಕಿಂಗ್ ಮಾಲೀಕರಾದ ಶ್ರೀ ಎಂ.ಕೆ. ಧನಂಜಯ ರವರಿಗೆ ಕೈಕೋಳ ತೊಡಿಸಿ ಅವರ ಜೊತೆ ಅಸಭ್ಯವಾಗಿ ವರ್ತಿಸಿ ತಮ್ಮ ಕರ್ತವ್ಯದಲ್ಲಿ ಅತೀವ ನಿರ್ಲಕ್ಷತನ ಬೇಜವಾಬ್ದಾರಿ ಹಾಗೂ ಕರ್ತವ್ಯ ಲೋಪವೆಸಗಿರುತ್ತೀರಿ.

ಮೇಲ್ಕಂಡ ಆರೋಪದ ಮೇಲೆ ಇಲಾಖಾ ವಿಚಾರಣೆ ನಡೆಸಿ, ವಿಚಾರಣಾಧಿಕಾರಿಗಳು ಆರೋಪ ಸಾಬೀತಾಗಿದೆ ಎಂದು ಸಲ್ಲಿಸಿದ ವರದಿ ಆಧಾರದ ಮೇಲೆ ಅರ್ಜಿದಾರರ ಸಮಜಾಯಿಷಿ ಪಡೆದು ಅದನ್ನೊಪ್ಪದ ಶಿಸ್ತುಪ್ರಾಧಿಕಾರಿ ಹಾಗೂ ಪೊಲೀಸ್ ಮಹಾ ನಿರೀಕ್ಷಕರು, ದಕ್ಷಿಣ ವಲಯ, ಮೈಸೂರು ಇವರು ಮೇಲೆ ಕ್ರಮ ಸಂಖ್ಯೆ:(1)ರಲ್ಲಿ ಓದಲಾದ ದಿನಾಂಕ: 29–10–2010ರ ಆದೇಶದಲ್ಲಿ ಅರ್ಜಿದಾರರ ವಾರ್ಷಿಕ ವೇತನ ಬಡ್ತಿಯನ್ನು ಒಂದು ವರ್ಷ ಕಾಲ ಮುಂದಿನ ವಾರ್ಷಿಕ ವೇತನ ಬಡ್ತಿಯ ಮೇಲೆ ದಕ್ಕೆಯಾಗದಂತೆ ಮುಂದೂಡುವ ದಂಡನೆಯನ್ನು ವಿಧಿಸಿದ್ದಾರೆ.

ಈ ಆದೇಶದ ವಿರುದ್ಧ ಸಲ್ಲಿಸಿದ ಅರ್ಜಿದಾರರ ಮೇಲ್ಮನವಿಯನ್ನು ಪರಿಶೀಲಿಸಿದ ಮೇಲ್ಮನವಿ ಪ್ರಾಧಿಕಾರ ಹಾಗೂ ಮಹಾ ನಿರ್ದೇಶಕರು, ಮತ್ತು ಆರಕ್ಷಕ ಮಹಾ ನಿರೀಕ್ಷಕರು, ಬೆಂಗಳೂರು, ಇವರು ಮೇಲೆ ಕ್ರಮ ಸಂಖ್ಯೆ: (2)ರಲ್ಲಿ ಓದಲಾದ ದಿನಾಂಕ: 04–08–2011ರ ಆದೇಶದಲ್ಲಿ ಮೇಲ್ಮನವಿಯನ್ನು ತಿರಸ್ಕರಿಸಿರುತ್ತಾರೆ.

ಈ ಎರಡೂ ಆದೇಶಗಳ ವಿರುದ್ಧ ಅರ್ಜಿದಾರರು ಸರ್ಕಾರಕ್ಕೆ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ಸಲ್ಲಿಸಿರುತ್ತಾರೆ. ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿನ ವಾದಾಂಶಗಳನ್ನೂ, ಇಲಾಖಾ ವಿಚಾರಣೆ ದಾಖಲೆಗಳೊಂದಿಗೆ ಪರಿಶೀಲಿಸಲಾಗಿದೆ. ಸದರಿ ಪರಿಷ್ಕರಣ ಮೇಲ್ಮನವಿ ಅರ್ಜಿಯಲ್ಲಿ ಪರಿಗಣಿಸುವಂತಹ ಯಾವುದೇ ಸಮರ್ಥನೀಯ ಹೊಸ ಅಂಶಗಳು ಇರುವುದಿಲ್ಲ. ಅರ್ಜಿದಾರರು ಶಿಸ್ತಿನ ಇಲಾಖೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು, ಅತೀವ ನಿರ್ಲಕ್ಷತೆ, ದುರ್ನಡತೆ ಹಾಗೂ ಬೇಜವಾಬ್ದಾರಿತನ ಪ್ರದರ್ಶಿಸಿರುವುದು ಸಾಬೀತಾಗಿರುತ್ತದೆ. ಆದ್ದರಿಂದ ಶಿಸ್ತು ಪ್ರಾಧಿಕಾರಿಯು ವಿಧಿಸಿರುವ ದಂಡನೆ ಆದೇಶದಲ್ಲಿ ಹಸ್ತಕ್ಷೇಪ ಮಾಡುವ ಅಗತ್ಯತೆ ಕಂಡು ಬರುತ್ತಿಲ್ಲವಾದ್ದರಿಂದ ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ಒಇ 127 ಪೊಸಿಅ 2011 ಬೆಂಗಳೂರು, ದಿನಾಂಕ: 16–04–2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳ ಹಿನ್ನೆಲೆಯಲ್ಲಿ, ಕರ್ನಾಟಕ ಪೊಲೀಸ್ ಅಧಿನಿಯಮ 1963ರ ಸೆಕ್ಷನ್ 25 ರಡಿಯಲ್ಲಿ ಸರ್ಕಾರಕ್ಕೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ, ಶ್ರೀ. ಸಿ.ಪಿ. ನವೀನ್, ಪಿ.ಎಸ್.ಐ., ಸರಗೂರು ಪೊಲೀಸ್ ಠಾಣೆ, ಹೆಚ್.ಡಿ. ಕೋಟೆ ಮೈಸೂರು ಜಿಲ್ಲೆ, ಇವರು ಸರ್ಕಾರಕ್ಕೆ ಸಲ್ಲಿಸಿದ್ದ ಪರಿಷ್ಕರಣ ಮೇಲ್ಮನವಿ ಅರ್ಜಿಯನ್ನು ತಿರಸ್ಕರಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಟಿ.ಎನ್. ರವಿಪ್ರಕಾಶ್
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. ನಂ. 1219

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ

ವಿಷಯ :– ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿಯಲ್ಲಿನ ಜಿಲ್ಲಾ ಆಸ್ಪತ್ರೆಗಳು ಮತ್ತು ಪ್ರಮುಖ ಆಸ್ಪತ್ರೆಗಳಿಗೆ ಉಪ ಮುಖ್ಯ ವೈದ್ಯಾಧಿಕಾರಿ ಹುದ್ದೆಗಳನ್ನು ಮರುಹಂಚಿಕೆ ಮೂಲಕ ಮಂಜೂರು ಮಾಡುವ ಬಗ್ಗೆ.

ಓದಲಾಗಿದೆ :– 1) ಸರ್ಕಾರಿ ಆದೇಶ ಸಂಖ್ಯೆ: ಆಕುಕ 33 ಎಂಎಸ್‌ಎಸ್ 2011, ದಿನಾಂಕ: 06–4–2011.

2) ಸರ್ಕಾರಿ ಆದೇಶ ಸಂಖ್ಯೆ: ಆಕುಕ 137 ಹೆಚ್‌ಎಸ್‌ಹೆಚ್ 2011, ದಿನಾಂಕ: 04–6–2011.

3) ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು ರವರು ಏಕಕಡತ ಪದ್ಧತಿಯ ಮೂಲಕ ಸಲ್ಲಿಸಿರುವ ಪ್ರಸ್ತಾವನೆ ಸಂಖ್ಯೆ: ಜಿಆರ್‌ಓ (1) 370 /2011–12 ದಿನಾಂಕ: 28–3–2012.

ಪ್ರಸ್ತಾವನೆ:

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಕಾರ್ಯನಿರ್ವಹಿಸುತ್ತಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳು, ಸಾಮಾನ್ಯವಾಗಿ, ಆರು ಹಾಸಿಗೆಗಳ ಸಾಮರ್ಥ್ಯ ಹೊಂದಿದ್ದು ಒಂದು ಕೇಂದ್ರಕ್ಕೆ ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯ ಒಬ್ಬರು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆ ಮಾತ್ರ ಸಾಕಾಗುತ್ತದೆ. ಆದರೆ, ಇಲಾಖೆಯಲ್ಲಿನ 2310 ಪ್ರಾಥಮಿಕ ಆರೋಗ್ಯ ಕೇಂದ್ರಗಳ ಪೈಕಿ, 320 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ಒಟ್ಟು 720 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಬಹಳ ಹಿಂದೆಯೆ ಮಂಜೂರು ಮಾಡಲಾಗಿದೆ. ರಾಜ್ಯಾದ್ಯಂತ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿ ಇರುವ ವೈದ್ಯರ ಹುದ್ದೆಗಳನ್ನು ತುಂಬುವಾಗ ಇಲಾಖೆಯಲ್ಲಿ ಲಭ್ಯವಿರುವ ವೈದ್ಯರ ಸೇವೆಯನ್ನು ಸರಿಯಾದ ಪ್ರಮಾಣದಲ್ಲಿ ಹಂಚಿಕೆ ಮಾಡುವ ಉದ್ದೇಶದಿಂದ, ಮೇಲೆ (1) ರಲ್ಲಿ ಓದಲಾದ ಸರ್ಕಾರಿ ಆದೇಶ ದಿನಾಂಕ: 06–4–2011 ರಲ್ಲಿ ಒಂದಕ್ಕಿಂತಲೂ ಹೆಚ್ಚಿನ ಸಂಖ್ಯೆಯ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿರುವ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ಹೆಚ್ಚುವರಿ ಹುದ್ದೆಗಳನ್ನು ಸ್ಥಗಿತಗೊಳಿಸಿ (kept in abeyance) ಸರ್ಕಾರವು ಆದೇಶಿಸಿತ್ತು. ಸದರಿ ಸ್ಥಗಿತಗೊಳಿಸಿದ ಹುದ್ದೆಗಳ ಪೈಕಿ ಕೆಲವು ಹುದ್ದೆಗಳನ್ನು ಅವಶ್ಯವಿರುವ ಇತರೇ ಆಸ್ಪತ್ರೆಗಳು / ಕೇಂದ್ರಗಳಿಗೆ ಮರುಹಂಚಿಕೆ ಮಾಡುವ ಮೂಲಕ ಮೇಲೆ (2) ರಲ್ಲಿ ಓದಲಾದ ಆದೇಶದಲ್ಲಿ ಸರ್ಕಾರವು ಸ್ಥಳಾಂತರಿಸಿದೆ.

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಜಿಲ್ಲಾ ಆಸ್ಪತ್ರೆಗಳು ಮತ್ತು ಪ್ರಮುಖ ಆಸ್ಪತ್ರೆಗಳಲ್ಲಿ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಮಂಜೂರಾಗಿರುವುದಿಲ್ಲ. ಸದರಿ ಆಸ್ಪತ್ರಗಳಲ್ಲಿ ವೈದ್ಯಕೀಯ ಚಿಕಿತ್ಸೆಗಾಗಿ ಬರುವ ಹೊರರೋಗಿ ಹಾಗು ಒಳರೋಗಿಗಳ ಸಂಖ್ಯೆ ಹೆಚ್ಚಾಗುತ್ತಿರುವುದರಿಂದ ಹಾಗು ಅದರಲ್ಲೂ ವಿಶೇಷವಾಗಿ ತುರ್ತು ಚಿಕಿತ್ಸಾ ಘಟಕಗಳಲ್ಲಿ ಕಾರ್ಯನಿರ್ವಹಿಸಲು ಎಂ.ಬಿ.ಬಿ.ಎಸ್. ವಿದ್ಯಾರ್ಹತೆಯುಳ್ಳ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯ ಸೇವೆ ಉಪಯುಕ್ತವಾಗುತ್ತದೆ. ಆದುದರಿಂದ, ಇಲಾಖೆಯ ವ್ಯಾಪ್ತಿಯಡಿ ಬರುವ 17 ಜಿಲ್ಲಾ ಆಸ್ಪತ್ರೆಗಳು ಹಾಗು ಬೆಂಗಳೂರಿನ ಎರಡು ಪ್ರಮುಖ ಆಸ್ಪತ್ರೆಗಳಾದ, ಜಯನಗರ ಸಾರ್ವಜನಿಕ ಅಸ್ಪತ್ರೆ ಮತ್ತು ಕೆ.ಸಿ.ಜನರಲ್ ಆಸ್ಪತ್ರೆಗಳಿಗೆ, ಅವುಗಳಲ್ಲಿನ ಹಾಸಿಗೆಗಳ ಸಾಮರ್ಥ್ಯಕ್ಕೆ ಅನುಗುಣವಾಗಿ, ಸ್ಥಗಿತಗೊಳಿಸಲಾಗಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳ ಪೈಕಿ ಒಟ್ಟಾರೆ 49 ಹುದ್ದೆಗಳನ್ನು ಸ್ಥಗಿತಗೊಳಿಸುವಿಕೆಯಿಂದ ಮುಕ್ತಗೊಳಿಸಿ ಮರುಹಂಚಿಕೆ ಮಾಡುವ ಮೂಲಕ ಮಂಜೂರು ಮಾಡಬೇಕೆಂದು ಮೇಲೆ (3) ರಲ್ಲಿ ಓದಲಾದ ಕಡತದಲ್ಲಿ ಆಯುಕ್ತರು ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿದ್ದಾರೆ.

ಮುಂದುವರೆದು, ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಜಿಲ್ಲಾ ಆಸ್ಪತ್ರೆ / ಪ್ರಮುಖ ಆಸ್ಪತ್ರೆಗಳಿಗೆ ನೇಮಿಸುವಾಗ ಸೇವೆಯಲ್ಲಿ ಹಿರಿಯರಾದವರನ್ನು ನೇಮಿಸಬೇಕಾಗುತ್ತದೆ. ಅದಕ್ಕಾಗಿ ಸದರಿ ಆಸ್ಪತ್ರೆಗಳಿಗೆ ಹಂಚಿಕೆ ಮಾಡಲು ಪ್ರಸ್ತಾಪಿಸಿರುವ 49 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳನ್ನು ಉಪ ಮುಖ್ಯ ವೈದ್ಯಾಧಿಕಾರಿ ಎಂಬುದಾಗಿ ಪದನಾಮಿಕರಿಸಲು ಉದ್ದೇಶಿಸಲಾಗಿದೆ. ಇಲಾಖೆಯಲ್ಲಿ ಕಾಲಮಿತಿ ಮುಂಬಡ್ತಿ ಯೋಜನೆಯಡಿ ಈಗಾಗಲೇ ಯಾವುದೇ ತಜ್ಞತೆಯಿಲ್ಲದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಯು 13 ವರ್ಷಗಳ ಸೇವೆ ಸಲ್ಲಿಸಿರುವ ವೈದ್ಯಾಧಿಕಾರಿಯನ್ನು ಉಪ ಮುಖ್ಯ ವೈದ್ಯಾಧಿಕಾರಿಯೆಂದು ಪರಿಗಣಿಸಲಾಗುತ್ತಿದೆ. ಇಲಾಖೆಯ ಒಟ್ಟಾರೆ ಮಂಜೂರಾದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳ ಪರಿಮಿತಿಯೊಳಗೆ ಈ ರೀತಿ ಪದನಾಮಿಕರಿಸಲು ಅವಕಾಶವಿದೆ. ಆದುದರಿಂದ, ಇಲಾಖೆಯಲ್ಲಿ ಲಭ್ಯವಿರುವ ಮಾನವ ಸಂಪನ್ಮೂಲಗಳನ್ನು ಸೂಕ್ತವಾಗಿ ಬಳಸಿಕೊಳ್ಳುವ ನಿಟ್ಟಿನಲ್ಲಿ ಸ್ಥಗಿತಗೊಳಿಸಲಾಗಿರುವ ಒಟ್ಟಾರೆ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳ ಪೈಕಿ, 49 ಹುದ್ದೆಗಳನ್ನು ಸದರಿ ಸ್ಥಗಿತಗೊಳಿಸುವಿಕೆಯಿಂದ ಹಿಂಪಡೆದು ಅವುಗಳನ್ನು ಉಪ ಮುಖ್ಯ ವೈದ್ಯಾಧಿಕಾರಿ ಎಂದು ಪದನಾಮೀಕರಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ 17 ಜಿಲ್ಲಾ ಆಸ್ಪತ್ರೆಗಳು ಮತ್ತು ಎರಡು ಪ್ರಮುಖ ಆಸ್ಪತ್ರೆಗಳಿಗೆ ಮರುಹೊಂದಾಣಿಕೆ ಮಾಡುವ ಮೂಲಕ ಮಂಜೂರು ಮಾಡಲು ಸರ್ಕಾರವು ತೀರ್ಮಾನಿಸಿದೆ. ಆದುದರಿಂದ, ಈ ಆದೇಶ .

ಸರ್ಕಾರದ ಆದೇಶ ಸಂಖ್ಯೆ: ಆಕುಕ 264 ಹೆಚ್‌ಎಸ್‌ಹೆಚ್ 2011 ಬೆಂಗಳೂರು, ದಿನಾಂಕ:05–4–2012

ಪ್ರಸ್ತಾವನೆಯಲ್ಲಿ ವಿವರಿಸಿದ ಕಾರಣಗಳಿಂದ, ಸರ್ಕಾರಿ ಆದೇಶ ಸಂಖ್ಯೆ: ಆಕುಕ 33 ಎಂಎಸ್‌ಎಸ್ 2011, ದಿನಾಂಕ: 06–4–2011 ರಲ್ಲಿ ಸ್ಥಗಿತಗೊಳಿಸಲಾಗಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳ ಪೈಕಿ 49 ಹುದ್ದೆಗಳನ್ನು ಸದರಿ ಸ್ಥಗಿತಗೊಳಿಸುವಿಕೆಯಿಂದ ಹಿಂಪಡೆದು ಅವುಗಳನ್ನು ಉಪ ಮುಖ್ಯ ವೈದ್ಯಾಧಿಕಾರಿ ಎಂದು ಪದನಾಮೀಕರಿಸಿ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ 17

ಜಿಲ್ಲಾ ಆಸ್ಪತ್ರೆಗಳು ಮತ್ತು ಎರಡು ಪ್ರಮುಖ ಆಸ್ಪತ್ರೆಗಳಿಗೆ (ಈ ಆದೇಶಕ್ಕೆ ಲಗತ್ತಿಸಿರುವ ಅನುಬಂಧದಲ್ಲಿನ ವಿವರಗಳಂತೆ) ಮರುಹೊಂದಾಣಿಕೆ ಮಾಡುವ ಮೂಲಕ ಸರ್ಕಾರವು ಮಂಜೂರು ಮಾಡಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯು ಸರ್ಕಾರಿ ಆದೇಶ ಸಂಖ್ಯೆ: ಎಫ್ ಡಿ 01 ಟಿಎಫ್‌ಪಿ 96 ದಿನಾಂಕ 10–7–1996 ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರತ್ಯಾಯೋಜಿಸಿರುವ ಅಧಿಕಾರದನ್ವಯ ಹೊರಡಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಚಿಕ್ಕೇಗೌಡ

ಸರ್ಕಾರದ ಅಧೀನ ಕಾರ್ಯದರ್ಶಿ,

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು)

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ: ಆಕುಕ 33 ಎಂಎಸ್‌ಎಸ್ 2011, ದಿನಾಂಕ: 06–4–2011 ರಲ್ಲಿ ಸ್ಥಗಿತಗೊಳಿಸಲಾಗಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳ ಪೈಕಿ 49 ಹುದ್ದೆಗಳನ್ನು ಸದರಿ ಸ್ಥಗಿತಗೊಳಿಸುವಿಕೆಯಿಂದ ಹಿಂಪಡೆದು ಅವುಗಳನ್ನು ಉಪ ಮುಖ್ಯ ವೈದ್ಯಾಧಿಕಾರಿ ಎಂದು ಪದನಾಮೀಕರಿಸಿ ಮರುಹೊಂದಾಣಿಕೆ ಮಾಡುವ ಮೂಲಕ ಸರ್ಕಾರವು ಮಂಜೂರು ಮಾಡಿದ ಉಪ ಮುಖ್ಯ ವೈದ್ಯಾಧಿಕಾರಿಗಳ ವಿವರ

ಕ್ರ. ಸಂ.	ಒಂದಕ್ಕಿಂತ ಹೆಚ್ಚು ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಗಳು ಮಂಜೂರಾಗಿದ್ದ ಪ್ರಾಥಮಿಕ ಆರೋಗ್ಯ ಕೇಂದ್ರದಿಂದ ಹೆಚ್ಚುವರಿ ಹುದ್ದೆಯನ್ನು ಸ್ಥಳಾಂತರಿಸಿದ ವಿವರಗಳು	ಸ್ಥಳಾಂತರಿಸಿದ ಹುದ್ದೆಗಳ ಸಂಖ್ಯೆ	ಸ್ಥಳಾಂತರಿಸಿದ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ ಹುದ್ದೆಯನ್ನು ಉಪ ಮುಖ್ಯ ವೈದ್ಯಾಧಿಕಾರಿ ಎಂದು ಪದನಾಮೀಕರಿಸಿ ಮರುಹೊಂದಾಣಿಕೆ ಮಂಜೂರು ಮಾಡಿದ ಆಸ್ಪತ್ರೆಯ ಹೆಸರು
1	**ರಾಮನಗರ ಜಿಲ್ಲೆ:** • ಪ್ರಾಥಮಿಕ ಆರೋಗ್ಯ ಕೇಂದ್ರ, ಮುದಗೆರೆ, ಚನ್ನಪಟ್ಟಣ ತಾಲ್ಲೂಕು • ಪ್ರಾಥಮಿಕ ಆರೋಗ್ಯ ಕೇಂದ್ರ, ಅಕ್ಕೂರು ಹೊಸಹಳ್ಳಿ, ಚನ್ನಪಟ್ಟಣ ತಾಲ್ಲೂಕು • ಪ್ರಾಥಮಿಕ ಆರೋಗ್ಯ ಕೇಂದ್ರ, ದೊಡ್ಡಮರಳವಾಡಿ, ಕನಕಪುರ ತಾಲ್ಲೂಕು	01 01 01	ಜಿಲ್ಲಾ ಆಸ್ಪತ್ರೆ, ರಾಮನಗರ – 03 ಹುದ್ದೆಗಳು
2	**ಚಿತ್ರದುರ್ಗ ಜಿಲ್ಲೆ:** • ಸಮುದಾಯ ಆರೋಗ್ಯ ಕೇಂದ್ರ, ಪಂಡರಹಳ್ಳಿ ಚಿತ್ರದುರ್ಗ ತಾಲ್ಲೂಕು • ಸಮುದಾಯ ಆರೋಗ್ಯ ಕೇಂದ್ರ, ತುರವನೂರು, ಚಿತ್ರದುರ್ಗ ತಾಲ್ಲೂಕು	01 01	ಜಿಲ್ಲಾ ಆಸ್ಪತ್ರೆ, ಚಿತ್ರದುರ್ಗ – 02 ಹುದ್ದೆಗಳು
3	**ಚಿಕ್ಕಬಳ್ಳಾಪುರ ಜಿಲ್ಲೆ:** • ಪ್ರಾಥಮಿಕ ಆರೋಗ್ಯ ಕೇಂದ್ರ, ಕೈವಾರ, ಚಿಂತಾಮಣಿ ತಾಲ್ಲೂಕು. • ಪ್ರಾಥಮಿಕ ಆರೋಗ್ಯ ಕೇಂದ್ರ, ಮಂಡಿಕಲ್ಲು, ಚಿಂತಾಮಣಿ ತಾಲ್ಲೂಕು. • ಪ್ರಾಥಮಿಕ ಆರೋಗ್ಯ ಕೇಂದ್ರ, ದಿಬ್ಬೂರು, ಚಿಕ್ಕಬಳ್ಳಾಪುರ ತಾಲ್ಲೂಕು.	01 01 01	ಜಿಲ್ಲಾ ಆಸ್ಪತ್ರೆ, ಚಿಕ್ಕಬಳ್ಳಾಪುರ – 03 ಹುದ್ದೆಗಳು.
4	**ಕೋಲಾರ ಜಿಲ್ಲೆ:** • ನಗರ ಪ್ರಾಥಮಿಕ ಆರೋಗ್ಯ ಕೇಂದ್ರ, ಕೋಲಾರ	01	ಎಸ್.ಎನ್.ಆರ್. ಜಿಲ್ಲಾ ಆಸ್ಪತ್ರೆ, ಕೋಲಾರ –01 ಹುದ್ದೆ.

5	**ತುಮಕೂರು ಜಿಲ್ಲೆ:** • ಪ್ರಾಥಮಿಕ ಆರೋಗ್ಯ ಕೇಂದ್ರ, ಉರ್ಡಿಗೇರೆ, ತುಮಕೂರು ತಾಲ್ಲೂಕು.	01	ತುಮಕೂರು ಜಿಲ್ಲಾ ಆಸ್ಪತ್ರೆ–01 ಹುದ್ದೆ
6	**ಚಾಮರಾಜನಗರ ಜಿಲ್ಲೆ:** • ಪ್ರಾಥಮಿಕ ಆರೋಗ್ಯ ಕೇಂದ್ರ, ಕಾಮಗೆರೆ, ಕೊಳ್ಳೇಗಾಲ ತಾಲ್ಲೂಕು. • ಪ್ರಾಥಮಿಕ ಆರೋಗ್ಯ ಕೇಂದ್ರ, ಹನೂರು, ಕೊಳ್ಳೇಗಾಲ ತಾಲ್ಲೂಕು. • ಪ್ರಾಥಮಿಕ ಆರೋಗ್ಯ ಕೇಂದ್ರ, ಉಮ್ಮತ್ತೂರು, ಚಾಮರಾಜನಗರ ತಾಲ್ಲೂಕು.	01 01 01	ಜಿಲ್ಲಾ ಆಸ್ಪತ್ರೆ, ಚಾಮರಾಜನಗರ –3 ಹುದ್ದೆಗಳು
7	**ಕೊಡಗು ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ಉದುಕೇರಿ, ವಿರಾಜಪೇಟೆ ತಾಲ್ಲೂಕು. * ಪ್ರಾಥಮಿಕ ಆರೋಗ್ಯ ಕೇಂದ್ರ, ಸುಂಟಿಕೊಪ್ಪ, ಸೋಮವಾರಪೇಟೆ ತಾಲ್ಲೂಕು.	01 01	ಜಿಲ್ಲಾ ಆಸ್ಪತ್ರೆ, ಮಡಿಕೇರಿ–2 ಹುದ್ದೆಗಳು
8	**ಚಿಕ್ಕಮಗಳೂರು ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ಬಣಕಲ್, ಮೂಡಿಗೆರೆ ತಾಲ್ಲೂಕು. * ಪ್ರಾಥಮಿಕ ಆರೋಗ್ಯ ಕೇಂದ್ರ, ಬಾಳೇನೊನ್ನೂರು, ಎನ್.ಆರ್. ಪುರ ತಾಲ್ಲೂಕು.	01 01	ಜಿಲ್ಲಾ ಆಸ್ಪತ್ರೆ, ಚಿಕ್ಕಮಗಳೂರು–2 ಹುದ್ದೆಗಳು
9	**ಉಡುಪಿ ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ಹಿರಿಯಡ್ಕ, ಉಡುಪಿ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಕಾಪು, ಉಡುಪಿ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಪಡುಬಿದ್ರೆ, ಉಡುಪಿ ತಾ:	01 01 01	ಜಿಲ್ಲಾ ಆಸ್ಪತ್ರೆ, ಉಡುಪಿ –3 ಹುದ್ದೆಗಳು
10	**ಬಾಗಲಕೋಟೆ ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ತೇರದಾಳ, ಜಮಖಂಡಿ ತಾ:	01	ಜಿಲ್ಲಾ ಆಸ್ಪತ್ರೆ, ಬಾಗಲಕೋಟೆ–1 ಹುದ್ದೆ
11	**ಬಿಜಾಪುರ ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ತ್ರಿಕೋಟ, ಬಿಜಾಪುರ ತಾ: * ಪ್ರಾಥಮಿಕ ಆರೋಗ್ಯ ಕೇಂಧ್ರ, ಮನಗೋಳಿ, ಬಿ. ಬಾಗೇವಾಡಿ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಕೊಣ್ಣೂರು, ಮುದ್ದೇಬಿಹಾಳ ತಾ:	01 01 01	ಜಿಲ್ಲಾ ಆಸ್ಪತ್ರೆ, ಬಿಜಾಪುರ –3 ಹುದ್ದೆಗಳು
12	**ಧಾರವಾಡ ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ಅಳ್ನಾವರ, ಧಾರವಾಡ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಉಪ್ಪಿನಬೆಟಗೇರಿ, ಧಾರವಾಡ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಬ್ಯಾಹಟ್ಟಿ, ಹುಬ್ಬಳ್ಳಿ ತಾ:	01 01 01	ಜಿಲ್ಲಾ ಆಸ್ಪತ್ರೆ, ಧಾರವಾಡ –3. ಹುದ್ದೆಗಳು
13	**ಗದಗ ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ಡಂಬಳ, ಮುಂಡರ್ಗಿ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಶಿರೋಳ, ನರಗುಂದ ತಾ: ಪ್ರಾಥಮಿಕ ಆರೋಗ್ಯ ಕೇಂದ್ರ, ಹೊಳೆಆಲೂರ, ರೋಣಾ ತಾ:	01 01 01	ಜಿಲ್ಲಾ ಆಸ್ಪತ್ರೆ, ಗದಗ –3 ಹುದ್ದೆಗಳು

14	**ಹಾವೇರಿ ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ಕುಪ್ಪೆಲೂರು, ರಾಣೇಬೆನ್ನೂರು ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಚಿಕ್ಕಬಾಸೂರು, ಬ್ಯಾಡಗಿ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಕಾಟೇನಳ್ಳಿ, ಹಾವೇರಿ ತಾ:	 01 01 01	ಜಿಲ್ಲಾ ಆಸ್ಪತ್ರೆ, ಹಾವೇರಿ –3 ಹುದ್ದೆಗಳು
15	**ಉತ್ತರ ಕನ್ನಡ ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ಅಟ್ಟಿಕೇರಿ, ಅಂಕೋಲ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಹಿರೇಗುತ್ತಿ, ಕುಮಟಾ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಅಂಗಡಿ, ಕಾರವಾರ ಜಿಲ್ಲೆ.	 01 01 01	ಜಿಲ್ಲಾ ಆಸ್ಪತ್ರೆ, ಕಾರವಾಡ –3 ಹುದ್ದೆಗಳು
16	**ಯಾದಗೀರಿ ಜಿಲ್ಲೆ:** * ಪ್ರಾಥಮಿಕ ಆರೋಗ್ಯ ಕೇಂದ್ರ, ಕೆಂಬಾವಿ, ಸುರಪುರ ತಾ: * ಪ್ರಾಥಮಿಕ ಆರೋಗ್ಯ ಕೇಂದ್ರ, ಯರಗೋಳ, ಯಾದಗೀರಿ ತಾ: ಪ್ರಾಥಮಿಕ ಆರೋಗ್ಯ ಕೇಂದ್ರ, ದೋರನಹಳ್ಳಿ, ಶಹಾಪುರ ತಾ:	 01 01 01	ಜಿಲ್ಲಾ ಆಸ್ಪತ್ರೆ, ಯಾದಗಿರಿ –3 ಹುದ್ದೆಗಳು
17	**ಕೊಪ್ಪಳ ಜಿಲ್ಲೆ:** • ಪ್ರಾಥಮಿಕ ಆರೋಗ್ಯ ಕೇಂದ್ರ, ಚಳ್ಳಗೆರೆ, ಕುಷ್ಟಗಿ ತಾ: • ಪ್ರಾಥಮಿಕ ಆರೋಗ್ಯ ಕೇಂದ್ರ, ಕವಲೂರ, ಕೊಪ್ಪಳ ತಾ: • ಎಲ್.ಸಿ.ಡಿ.ಆರ್. ಜಿಲ್ಲಾ ಆರೋಗ್ಗ ಮತ್ತು ಕುಟುಂಬ ಕಲ್ಯಾಣ ಕಛೇರಿ, ಕೊಪ್ಪಳ.	 01 01 01	ಜಿಲ್ಲಾ ಆಸ್ಪತ್ರೆ, ಕೊಪ್ಪಳ –3 ಹುದ್ದೆಗಳು
18	ಎಲ್.ಸಿ.ಡಿ.ಆರ್., ಆಕುಕ ಅಧಿಕಾರಿ ಕಛೇರಿ, ಬೆಂಗಳೂರು ನಗರ ಜಿಲ್ಲೆ	03	ಕೆ.ಸಿ.ಜನರಲ್ ಆಸ್ಪತ್ರೆ, ಮಲ್ಲೇಶ್ವರಂ, ಬೆಂಗಳೂರು–03 ಹುದ್ದೆಗಳು
19	ಎಲ್.ಸಿ.ಡಿ.ಆರ್., ಆಕುಕ ಅಧಿಕಾರಿ ಕಛೇರಿ, ಬೆಂಗಳೂರು (ಗ್ರಾ) ಜಿಲ್ಲೆ	03	ಸಾರ್ವಜನಿಕ ಆಸ್ಪತ್ರೆ, ಜಯನಗರ, ಬೆಂಗಳೂರು–03 ಹುದ್ದೆಗಳು
	ಒಟ್ಟು	**49**	**49**

ಚಿಕ್ಕೇಗೌಡ
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಗ ಮತ್ತು ಕುಟುಂಬ ಕಲ್ಯಾಣ ಇಲಾಖೆ (ಸೇವೆಗಳು)

ಪಿ.ಆರ್. ನಂ. 1215

ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ

ವಿಷಯ : ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಜೇನುಕೃಷಿ ವಿಭಾಗದಲ್ಲಿ ದಿನಗೂಲಿ/ಸಂಚಿತ ವೇತನ/ಗೌರವ ಧನ/ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ಜೇನುಕೃಷಿ ತಾತ್ಕಾಲಿಕ ನೌಕರರನ್ನು ತೋಟಗಾರಿಕೆ ಇಲಾಖೆಗೆ ವರ್ಗಾಯಿಸುವ ಬಗ್ಗೆ.

ಓದಲಾಗಿದೆ:

1. ಸರ್ಕಾರದ ಆದೇಶ ಸಂಖ್ಯೆ: ವಾಕೈ 243 ಕೈಸೇವಿ 2008 ದಿ: 13.04.2011
2. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರದ ಸಂಖ್ಯೆ:ಆಡಳಿತ: ಸಿಬ್ಬಂದಿ: ಇ3:44:2008–09 ದಿನಾಂಕ:07.06.2011
3. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರದ ಸಂಖ್ಯೆ:ಆಡಳಿತ:ಸಿಬ್ಬಂದಿ: ಇ3:44:2008–09 ದಿನಾಂಕ:17.11.2011
4. ಸರ್ಕಾರದ ಆದೇಶ ಸಂಖ್ಯೆ: ವಾಕೈ:18:ಕೈಸೇವಿ:2011 ದಿನಾಂಕ: 06.08.2011
5. ಕೈಗಾರಿಕಾಭಿವೃದ್ಧಿ ಆಯುಕ್ತರ ಪತ್ರದ ಸಂಖ್ಯೆ:ಆಡಳಿತ:ಸಿಬ್ಬಂದಿ:ಇ3:44:2008–09 ದಿನಾಂಕ:02.01.2012

ಪ್ರಸ್ತಾವನೆ:

ಮೇಲೆ ಓದಲಾದ ಉಲ್ಲೇಖ (1) ರ ಸರ್ಕಾರದ ಆದೇಶ ದಿ: 13.04.2011 ರಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಜೇನುಕೃಷಿ ವಿಭಾಗವನ್ನು ಸಂಬಂಧಿಸಿದ ಅಧಿಕಾರಿ/ಸಿಬ್ಬಂದಿ ಹುದ್ದೆಗಳನ್ನು ಅನುಬಂಧ I ರಲ್ಲಿ ಸೂಚಿಸಿದಂತೆ ತಕ್ಷಣದಿಂದ ಜಾರಿಗೆ ಬರುವಂತೆ ತೋಟಗಾರಿಕೆ ಇಲಾಖೆಗೆ ವರ್ಗಾಯಿಸಿದೆ. ಹಾಲಿ ಹುದ್ದೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಅಧಿಕಾರಿ/ ಸಿಬ್ಬಂದಿಗಳ ವಿವರವನ್ನು ಅನುಬಂಧ II ರಲ್ಲಿ ನೀಡಿದೆ, ಅವರನ್ನೂ ಸಹ ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲಾಗಿರುತ್ತದೆ.

ಮೇಲೆ ಓದಲಾದ (2) ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು, ಮೇಲ್ಕಂಡ ಸರ್ಕಾರದ ಆದೇಶದಲ್ಲಿ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಲ್ಲಿನ ಜೇನುಕೃಷಿ ವಿಭಾಗವನ್ನು ಸಿಬ್ಬಂದಿ ಹಾಗೂ ಸ್ಥಿರಾಸ್ತಿ/ಚರಾಸ್ತಿ ಸಮೇತ ತೋಟಗಾರಿಕೆ ಇಲಾಖೆಗೆ ವರ್ಗಾವಣೆ ಮಾಡಿ ಆದೇಶಿಸಲಾಗಿದ್ದು, ಆದೇಶದಲ್ಲಿನ ಅನುಬಂಧ–1 ಹಾಗೂ 2 ರಲ್ಲಿ ಇಲಾಖೆಯ ಖಾಯಂ ಸಿಬ್ಬಂದಿಗಳ ಹೆಸರುಗಳನ್ನು ಮಾತ್ರ ನಮೂದಿಸಲಾಗಿರುತ್ತದೆ. ಸದರಿ ಆದೇಶದಂತೆ ಇವರುಗಳನ್ನು ದಿನಾಂಕ:25.04.2011 ರಂದು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯಿಂದ ಬಿಡುಗಡೆ ಮಾಡಿ ಸಂಬಂಧಪಟ್ಟ ಜಿಲ್ಲಾ ಉಪ ನಿರ್ದೇಶಕರುಗಳು, ತೋಟಗಾರಿಕೆ ಇಲಾಖೆಗೆ ವರದಿ ಮಾಡಿಕೊಳ್ಳಲು ಸೂಚಿಸಲಾಗಿತ್ತು.

ಮೇಲೆ ಓದಲಾದ (3) ರ ಪತ್ರದಲ್ಲಿ ಕೈಗಾರಿಕಾಭಿವೃದ್ಧಿ ಆಯುಕ್ತರು ವಿವರಗಳೊಂದಿಗೆ ತಾತ್ಕಾಲಿಕ ಜೇನುಕೃಷಿ ವಿಭಾಗದಲ್ಲಿ ಸಂಚಿತ ವೇತನ/ ಗೌರವಧನ/ ದಿನಗೂಲಿ ಆಧಾರದ ಮೇರೆಗೆ ಕರ್ತವ್ಯ ನಿರ್ವಹಿಸುತ್ತಿರುವ ತಾತ್ಕಾಲಿಕ ಜೇನುಕೃಷಿ ಸಿಬ್ಬಂದಿಯ ಹೆಸರುಗಳನ್ನು ಕೈಬಿಟ್ಟಿರುವ ಬಗ್ಗೆ ಅನುದಾನವಿಲ್ಲದಿರುವ ಬಗ್ಗೆ ಹಾಗೂ ನೌಕರರಿಗೆ ಕೆ.ಎ.ಟಿ.ಯಲ್ಲಿ ನೀಡಲಾಗಿರುವ ತಡೆಯಾಜ್ಞೆ ಆದೇಶವನ್ನು ರದ್ದುಗೊಳಿಸಲು ಪ್ರಕರಣವನ್ನು ವಜಾಗೊಳಿಸಲು ಹಾಗೂ ಸಿಬ್ಬಂದಿಗಳಿಗೆ ವೇತನ ನೀಡುವ ಬಗ್ಗೆ ಇಲಾಖೆಯಲ್ಲಿ ಮುಂದುವರಿಸುವ ಅಥವಾ ತೋಟಗಾರಿಕೆ ಇಲಾಖೆಗೆ ವರ್ಗಾಯಿಸುವ ಬಗ್ಗೆ ಆದೇಶ ಮಾಡಲು ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದಾರೆ.

ಮೇಲೆ ಓದಲಾದ (4) ರ ಸರ್ಕಾರದ ಆದೇಶದಲ್ಲಿ ಜೇನುಕೃಷಿ ಸಾಕಾಣಿಕೆಯನ್ನು ಸುವರ್ಣಭೂಮಿ ಯೋಜನೆಯಡಿಯಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ತೋಟಗಾರಿಕೆ ಇಲಾಖೆಯ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆಯ 2011–12ನೇ ಸಾಲಿನ ಲೆಕ್ಕಶೀರ್ಷಿಕೆ **"2851–00–200–0–01** (ಯೋಜನೆ) ಅಡಿಯಲ್ಲಿ ಒದಗಿಸಲಾದ ರೂ.6.25 ಕೋಟಿ (ಆರು ಕೋಟಿ ಇಪ್ಪತ್ತೈದು ಲಕ್ಷ ರೂಪಾಯಿಗಳು ಮಾತ್ರ) ಅನುದಾನವನ್ನು ಉಪಯೋಗಿಸಿಕೊಳ್ಳಲು ನಿರ್ದೇಶಕರು, ತೋಟಗಾರಿಕೆ ಇಲಾಖೆ ರವರಿಗೆ ಆಥರೈಸ್ ಮಾಡಿ ಸರ್ಕಾರವು ಮಂಜೂರಾತಿ ನೀಡಿದೆ.

ಮೇಲೆ ಓದಲಾದ (5) ರ ಪತ್ರದಲ್ಲಿ ಅಂತಿಮವಾಗಿ ಒಟ್ಟು 15 ಜನ ನೌಕರರ ಸೇವೆಯನ್ನು ತೋಟಗಾರಿಕೆ ಇಲಾಖೆಗೆ ವರ್ಗಾವಣೆ ಮಾಡಿ ಸರ್ಕಾರದ ಹಂತದಲ್ಲಿ ಆದೇಶ ಹೊರಡಿಸಲು ಮತ್ತೊಮ್ಮೆ ಕೋರಿರುತ್ತಾರೆ.

ಆದಾಗ್ಯೂ, ಕೈಗಾರಿಕಾಭಿವೃದ್ಧಿ ಆಯುಕ್ತರು ಪ್ರಸ್ತುತ ವಿಷಯದಲ್ಲಿ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಗಿದೆ. ಆದರೆ, ಆಯುಕ್ತರು ಪ್ರಸ್ತಾಪಿಸಿದ ಪ್ರಸ್ತಾವನೆ ದಿ: 02.01.2012ರಲ್ಲಿ ಒಟ್ಟು 15 ಜನ ಸಿಬ್ಬಂದಿ ವರ್ಗದವರನ್ನು ತೋಟಗಾರಿಕೆ ಇಲಾಖೆಗೆ ವರ್ಗಾಯಿಸಲು ಉಲ್ಲೇಖಿಸಲಾಗಿರುತ್ತದೆ.

ಪರಂತು, ಶ್ರೀಯುತರುಗಳಾದ (1) ಶ್ರೀ ವಿ.ಸಿ. ಭೈರಪ್ಪ, (2) ಶ್ರೀ ಎಸ್.ಎಲ್. ಸುಬ್ಬರಾಯಪ್ಪ, (3) ಶ್ರೀ ರಾಮಚಂದ್ರ, (4) ಶ್ರೀ ಎನ್.ಎಸ್. ಸುರೇಶ್, (5) ಶ್ರೀ ಬಿ.ಎನ್. ನರಸಿಂಹಯ್ಯ ಮತ್ತು (6) ಶ್ರೀ ವಿ. ಬಾಬು ಇವರುಗಳು ತಾತ್ಕಾಲಿಕವಾಗಿ ದಿನಗೂಲಿ/ ಸಂಚಿತ ವೇತನ/ ಗೌರವ ಧನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿದ್ದು ಇವರುಗಳನ್ನು ತೋಟಗಾರಿಕೆ ಇಲಾಖೆಗೆ ವರ್ಗಾಯಿಸದೇ ಇದ್ದ ಹಿನ್ನೆಲೆಯಲ್ಲಿ ಅವರುಗಳಿಗೆ ನ್ಯಾಯ ಒದಗಿಸಲು ಹಾಗೂ ನ್ಯಾಯ ನೀಡುವಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ದಾವೆ ಸಂಖ್ಯೆ: 3440–3445/2011 ನ್ನು ದಾಖಲಿಸಿರುತ್ತಾರೆ. ಆದರೆ, ಕೆ.ಎ.ಟಿ.ಯು ದಿ: 07.03.2012 ರಲ್ಲಿ ತಮ್ಮ ಅಂತಿಮ ತೀರ್ಪನ್ನು ನೀಡಿ ಸರ್ಕಾರವು ಇವರಿಗೆ ಆದೇಶ ನೀಡುವ ಭರವಸೆ ನೀಡಿದ ಹಿನ್ನೆಲೆಯಲ್ಲಿ ಸದರಿಯವರನ್ನು ಕೆ.ಎ.ಟಿ.ಯಲ್ಲಿ ಸಲ್ಲಿಸಿದ ದಾವೆಯನ್ನು ವಜಾ ಮಾಡಲಾಗಿದೆ ಎಂಬುದಾಗಿ ಆದೇಶ ಮಾಡಲಾಗಿರುತ್ತದೆ. ಆದುದರಿಂದ, ಆಯುಕ್ತರ ದಿ: 02.01.2012ರ ಪ್ರಸ್ತಾವನೆಯನ್ನು ಪರಿಗಣಿಸಿ ಹಾಗೂ ಅದರಲ್ಲಿ ಕೋಷ್ಟಕದಲ್ಲಿ ಹೆಸರಿಸಿದಂತಹ ಒಟ್ಟು 15 ಸಿಬ್ಬಂದಿ ವರ್ಗದವರುಗಳ ಪೈಕಿ 6 ಜನ ಸಿಬ್ಬಂದಿ ವರ್ಗದವರನ್ನು ಅಂದರೆ (1) ಶ್ರೀ ವಿ.ಸಿ. ಭೈರಪ್ಪ, (2) ಶ್ರೀ ಎಸ್.ಎಲ್. ಸುಬ್ಬರಾಯಪ್ಪ, (3) ಶ್ರೀ ರಾಮಚಂದ್ರ, (4) ಶ್ರೀ ಎನ್.ಎಸ್. ಸುರೇಶ್, (5) ಶ್ರೀ ಬಿ.ಎನ್. ನರಸಿಂಹಯ್ಯ ಮತ್ತು (6) ಶ್ರೀ ವಿ. ಬಾಬು ಇವರುಗಳು ಕೆ.ಎ.ಟಿ. ಯಲ್ಲಿ ತಮ್ಮ ಅರ್ಜಿಗಳನ್ನು ಹಿಂತೆಗೆದುಕೊಂಡಿದ್ದಾರೆ ಹಾಗೂ ಕೆ.ಎ.ಟಿ.ಯು ಅರ್ಜಿ ವಿಲೇವಾರಿ ಮಾಡಿದ ಹಿನ್ನೆಲೆಯಲ್ಲಿ ಸರ್ಕಾರವು ಕೆಳಕಂಡಂತೆ ಆದೇಶ ಹೊರಡಿಸಿದೆ.

ಸರ್ಕಾರದ ಆದೇಶ ಸಂಖ್ಯೆ: ವಾಕೈ 243 ಕೈಸೇವಿ 2008 ಬೆಂಗಳೂರು, ದಿನಾಂಕ: 09.04.2012

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಮೇರೆಗೆ ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಆಡಳಿತ ವ್ಯಾಪ್ತಿಯಲ್ಲಿ ಬರುವ ಜೇನುಕೃಷಿ ವಿಭಾಗದಲ್ಲಿ ತಾತ್ಕಾಲಿಕವಾಗಿ ದಿನಗೂಲಿ/ ಸಂಚಿತ ವೇತನ/ ಗೌರವ ಧನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ ಒಟ್ಟು 6 ಜನ ((1) ಶ್ರೀ ವಿ.ಸಿ. ಭೈರಪ್ಪ, (2) ಶ್ರೀ ಎಸ್.ಎಲ್. ಸುಬ್ಬರಾಯಪ್ಪ, (3) ಶ್ರೀ ರಾಮಚಂದ್ರ, (4) ಶ್ರೀ ಎನ್.ಎಸ್. ಸುರೇಶ್, (5) ಶ್ರೀ ಬಿ.ಎನ್. ನರಸಿಂಹಯ್ಯ ಮತ್ತು (6) ಶ್ರೀ ವಿ. ಬಾಬು ಇವರುಗಳ ವಿವರಗಳನ್ನು ಅನುಬಂಧ–1 ರಲ್ಲಿ ನೀಡಿದೆ. ಇವರುಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಯಥಾಸ್ಥಿತಿಯಲ್ಲಿ ತೋಟಗಾರಿಕೆ ಇಲಾಖೆಗೆ ವರ್ಗಾಯಿಸಿದೆ.

ಕೈಗಾರಿಕಾಭಿವೃದ್ಧಿ ಆಯುಕ್ತರು ಹಾಗೂ ನಿರ್ದೇಶಕರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆ ಇವರು ಜೇನುಕೃಷಿ ವಿಭಾಗಕ್ಕೆ ಸಂಬಂಧಪಟ್ಟಂತೆ ಮೇಲ್ಕಂಡ 6 ಜನ ಅಂದರೆ (1) ಶ್ರೀ ವಿ.ಸಿ. ಭೈರಪ್ಪ, (2) ಶ್ರೀ ಎಸ್.ಎಲ್. ಸುಬ್ಬರಾಯಪ್ಪ, (3) ಶ್ರೀ ರಾಮಚಂದ್ರ, (4) ಶ್ರೀ ಎನ್.ಎಸ್. ಸುರೇಶ್, (5) ಶ್ರೀ ಬಿ.ಎನ್. ನರಸಿಂಹಯ್ಯ ಮತ್ತು (6) ಶ್ರೀ ವಿ. ಬಾಬು ಇವರುಗಳ ಬಗ್ಗೆ ಅಗತ್ಯ ಮಾಹಿತಿ/ ದಾಖಲಾತಿಗಳನ್ನು ತೋಟಗಾರಿಕೆ ಇಲಾಖೆ ವಶಕ್ಕೆ ನೀಡಲು ಮುಂದಿನ ಕ್ರಮ ಕೈಗೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ

ಎಲ್.ಎಸ್.ವಾಸನ್

ಸರ್ಕಾರದ ಅಧೀನ ಕಾರ್ಯದರ್ಶಿ,

ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ, (ಸೇವೆಗಳು).

ಅನುಬಂಧ–1

ಜೇನುಕೃಷಿ ವಿಭಾಗದಲ್ಲಿ ತಾತ್ಕಾಲಿಕವಾಗಿ ಸಂಚಿತ ವೇತನ/ದಿನಗೂಲಿ/ಗೌರವಧನ ಆಧಾರದ ಮೇಲೆ ಕರ್ತವ್ಯ ನಿರ್ವಹಿಸುತ್ತಿರುವ 6 ಜನ ನೌಕರರ ವಿವರ.

ಕ್ರ. ಸಂ.	ನೌಕರರ ಹೆಸರು ಹಾಗೂ ವಿಳಾಸ ಶ್ರೀಯುತರು	ನೇಮಕಾತಿ ವಿಧಾನ	ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ	ಹಾಲಿ ಪಡೆಯುತ್ತಿರುವ ಮಾಹೆಯಾನ ವೇತನ	ಷರಾ
01	ವಿ.ಸಿ.ಭೈರಪ್ಪ, ಜೇನುಕೃಷಿ ತರಬೇತುದಾರ ವಿದ್ಯಾನಗರ, ಯಲಹಂಕ ಹೋಬಳಿ, ಬೆಂಗಳೂರು ಉತ್ತರ ತಾಲೂಕು	ಗೌರವ ಧನ	01.12.1989	ರೂ.5,190–00	
02	ಎಸ್.ಎಲ್. ಸುಬ್ಬರಾಯಪ್ಪ, ಜೇನುಕೃಷಿ ತರಬೇತುದಾರ, ಕುಂಬಳಗೋಡು, ಕೆಂಗೇರಿ ಹೋಬಳಿ, ಬೆಂಗಳೂರು ದಕ್ಷಿಣ ತಾಲೂಕು	ಗೌರವ ಧನ	01.12.1989	ರೂ.5,190–00	
03	ರಾಮಚಂದ್ರ, ಜೇನುಕೃಷಿ ತರಬೇತುದಾರ, ಸುಮಗನಹಳ್ಳಿ ಯಶವಂತಪುರ ಹೋಬಳಿ, ಬೆಂಗಳೂರು ಉತ್ತರ ತಾಲೂಕು	ಗೌರವ ಧನ	30.06.1994	ರೂ.5,190–00	
04	ಎನ್.ಎಸ್.ಸುರೇಶ್, ಜೇನುಕೃಷಿ ತರಬೇತುದಾರ, ಕೆಂಗೇರಿ ವಿದ್ಯಾಪೀಠ, ಬೆಂಗಳೂರು ದಕ್ಷಿಣ ತಾಲೂಕು	ಗೌರವ ಧನ	25.09.1997	ರೂ.5,190–00	
05	ಬಿ.ಎನ್.ನರಸಿಂಹಯ್ಯ, ಜೇನುಕೃಷಿ ತರಬೇತುದಾರ, ಶಿವನಹಳ್ಳಿ, ಬನ್ನೇರುಘಟ್ಟ ಹೋಬಳಿ, ಆನೇಕಲ್ ತಾಲೂಕು	ಗೌರವ ಧನ	25.09.1997	ರೂ.5,190–00	

ಕ್ರ. ಸಂ.	ನೌಕರರ ಹೆಸರು ಹಾಗೂ ವಿಳಾಸ ಶ್ರೀಯುತರು	ನೇಮಕಾತಿ ವಿಧಾನ	ಯಾವ ದಿನಾಂಕದಿಂದ ಕರ್ತವ್ಯ ನಿರ್ವಹಿಸುತ್ತಿದ್ದಾರೆ	ಹಾಲಿ ಪಡೆಯುತ್ತಿರುವ ಮಾಹೆಯಾನ ವೇತನ	ಷರಾ
06	ವಿ.ಬಾಬು, ಜೇನುಕೃಷಿ ತರಬೇತುದಾರ, ಮಾರತಹಳ್ಳಿ, ಬೆಂಗಳೂರು ಪೂರ್ವ ತಾಲೂಕು	ಗೌರವ ಧನ	25.09.1997.	ರೂ.5,190-00	

ಎಲ್.ಎಸ್. ವಾಸನ್
ಸರ್ಕಾರದ ಅಧೀನ ಕಾರ್ಯದರ್ಶಿ,
ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ (ಸೇವೆಗಳು).

ಪಿ.ಆರ್. 1199

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ : ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ 2012-13ನೇ ಸಾಲಿನ ಮುಂದುವರೆದ ಯೋಜನೆಗಳ ಬಗ್ಗೆ.

ಓದಲಾಗಿದೆ : ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿ:05-04-2012 ರಂದು ನಡೆದ ಸಭೆ.

ಪ್ರಸ್ತಾವನೆ :

ಮೇಲೆ ಓದಲಾದ ಮಾತಂ ಜೈತಂ ವಿತಂ ಇಲಾಖೆಯ ಪ್ರಧಾನ ಕಾರ್ಯದರ್ಶಿ ಯವರ ಅಧ್ಯಕ್ಷತೆಯಲ್ಲಿ ದಿನಾಂಕ.05.04.2012 ರಲ್ಲಿ ನಡೆದ ಸಭೆಯಲ್ಲಿ ಇಲಾಖಾ ಮುಖ್ಯಸ್ಥರು ಅವರ ಬೇಡಿಕೆಗೆ ಅನುಗುಣವಾಗಿ ಸಲ್ಲಿಸಿದ ಅನುದಾನದ ಪ್ರಸ್ತಾವನೆಯಂತೆ ವಿವಿಧ ಯೋಜನೆಗಳ ಅನುಷ್ಠಾನದ ಸಂಬಂಧ ಸಭೆಯಲ್ಲಿ ದೀರ್ಘವಾಗಿ ಚರ್ಚಿಸಲಾಗಿದೆ. ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯಡಿಯಲ್ಲಿ ಬರುವ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಭಾಗಕ್ಕೆ 2012-13 ಸಾಲಿನ ಆಯವ್ಯಯ ಅಂದಾಜು ವೆಚ್ಚದಲ್ಲಿ ನಿಗಧಿಪಡಿಸಿರುವ ಯೋಜನಾ ವೆಚ್ಚ ರೂ.7300.00 ಲಕ್ಷಗಳಿಗೆ ಮತ್ತು ಯೋಜನೇತರ ವೆಚ್ಚವಾಗಿ ರೂ.197.00 ಲಕ್ಷಗಳಿಗೆ ಸೀಮಿತಗೊಳಿಸಿ 2012-13 ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಆದೇಶವನ್ನು ಹೊರಡಿಸಲು ನಿರ್ಧರಿಸಲಾಗಿದ್ದು, ಅದರಂತೆ ಈ ಕೆಳಕಂಡ ಆದೇಶ

ಸರ್ಕಾರಿ ಆದೇಶ ಸಂಖ್ಯೆ: ಐಟಿಡಿ 36 ಎಡಿಎಂ 2012 ಬೆಂಗಳೂರು, ದಿ: 05-04-2012

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ವಿಭಾಗಕ್ಕೆ ಸಂಬಂಧಿಸಿದಂತೆ, 2012-13ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ವೆಚ್ಚದಲ್ಲಿ ನಿಗಧಿಪಡಿಸಿರುವ ಯೋಜನಾ ವೆಚ್ಚ ರೂ.7300.00 ಲಕ್ಷಗಳಿಗೆ [ಏಳು ಸಾವಿರದ ಮುನ್ನೂರು ಲಕ್ಷ ರೂಪಾಯಿಗಳು ಮಾತ್ರ] ಮತ್ತು ಯೋಜನೇತರ ವೆಚ್ಚವಾಗಿ ರೂ.197 ಲಕ್ಷಗಳಿಗೆ [ನೂರ ತೊಂಭತ್ತೇಳು ಲಕ್ಷ ರೂಪಾಯಿಗಳು ಮಾತ್ರ] ಸೀಮಿತಗೊಳಿಸಿ 2012-13 ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಆದೇಶವನ್ನು ತಕ್ಷಣದಿಂದ ಅನ್ವಯವಾಗುವಂತೆ ಮಂಜೂರಾತಿ ನೀಡಿ ಹೊರಡಿಸಲಾಗಿದೆ.

2012-13 ನೇ ಸಾಲಿನ ಮುಂದುವರೆದ ಕಾರ್ಯಕ್ರಮ ಮತ್ತು ಲೆಕ್ಕ ಶೀರ್ಷಿಕೆವಾರು ಯೋಜನೆ ಮತ್ತು ಯೋಜನೇತರ ಹಂಚಿಕೆಯನ್ನು ಈ ಆದೇಶಕ್ಕೆ ಲಗತ್ತಿಸಲಾದ ಅನುಬಂಧದಲ್ಲಿ ಕಾಣಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ.ಎಫ್.ಡಿ 01 ಟಿಎಫ್‌ಪಿ 2008, ದಿನಾಂಕ.16.05.2008 ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾದ ಪ್ರದತ್ತವಾದ ಅಧಿಕಾರದನ್ವಯ ಆರ್ಥಿಕ ಇಲಾಖೆಯ ಸಹಮತಿ ಇದೆ ಎಂದು ಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅದೇಶಾನುಸಾರ ಮತ್ತು ಅವರ ಹೆಸರಿನಲ್ಲಿ
ಇ. ರಾಮಕೃಷ್ಣಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಅನುಬಂಧ

ಸರ್ಕಾರದ ಆದೇಶ ಸಂಖ್ಯೆ: ಐಟಿಡಿ 36 ಎಡಿಎಂ 2012 ದಿನಾಂಕ:05-04-2012

(ಒಟ್ಟು ರೂ. ಲಕ್ಷಗಳಲ್ಲಿ)

ಕ್ರಮ ಸಂಖ್ಯೆ	ಲೆಕ್ಕ ಶೀರ್ಷಿಕೆ / ಯೋಜನೆ ವಿವರ	ಹಂಚಲಾದ ಅನುದಾನ	ಖರ್ಚಿನ ವಿವರ	
1.	**3451-00-090-2-01 ಮಾಹಿತಿ ತಂತ್ರಜ್ಞಾನ ಉನ್ನತೀಕರಣ ಮತ್ತು ಅಭಿವೃದ್ಧಿ ಇತರೆ ಖರ್ಚು (059) (ಯೋಜನೆ)** **133 ವಿಶೇಷ ಅಭಿವೃದ್ಧಿ ಯೋಜನೆ**	**1000.00** **300.00**	**ಈ ಲೆಕ್ಕಶೀರ್ಷಿಕೆಯಡಿಯಲ್ಲಿ ರೂ.1300 ಲಕ್ಷಗಳನ್ನು ಈ ಕೆಳಕಂಡ ಉದ್ದೇಶಗಳಿಗಾಗಿ ಬಳಸಬಹುದಾಗಿದೆ:-** 1. ಐಬಿಎಬಿ ಮತ್ತು ಸಿ.ಹೆಚ್.ಜಿ ಸಂಸ್ಥೆಗಳ ಆಡಳಿತಾತ್ಮಕ ವೆಚ್ಚ, 2. ಕಿಯೋನಿಕ್ಸ್ ಸಂಸ್ಥೆಯ ನಿರ್ವಹಣೆಗೆ ಮತ್ತು ಶಿವಮೊಗ್ಗ ಮತ್ತು ಗುಲ್ಬರ್ಗಾ ಐಟಿ ಪಾರ್ಕ್‌ನ ನಿರ್ವಹಣೆಗಾಗಿ ಬಡ್ಡಿ ರಿಯಾಯಿತಿ ಇತ್ಯಾದಿ, 3. ಕಿಯೋನಿಕ್ಸ್ ಸಂಸ್ಥೆಗೆ ಹುಬ್ಬಳ್ಳಿ ಐಟಿ ಪಾರ್ಕ್ ನಿರ್ವಹಣೆಗಾಗಿ, 4. ಬೆಂಗಳೂರು ಐಟಿ ಬಿಜ್ 2012 ಇವೆಂಟ್‌ಗಳನ್ನೊಳ - ಗೊಂಡಂತೆ ಮಾತಂ ಜೈತಂ ಉನ್ನತೀಕರಣ ಚಟುವಟಿಕೆಗಳಿಗಾಗಿ ಮತ್ತು ಬೆಂಗಳೂರು ಬಯೋ Cyber Security Summit etc., 5. ಕೆಬಿಟ್ಸ್ ಸಂಸ್ಥೆಯ ಆಡಳಿತ ವೆಚ್ಚ, 6. ಐಟಿಐಆರ್ ಯೋಜನೆಯ ಅನುಷ್ಠಾನಗೆ ಸಂಬಂಧ ವೆಚ್ಚ, 7. ಕಿಯೋನಿಕ್ಸ್ ವತಿಯಿಂದ ಐಐಐಟಿ-ಬಿ ಗೆ ಜಮೀನು ಖರೀದಿ ಮತ್ತು ಅಭಿವೃದ್ಧಿ, 8. ರಾಜ್ಯದ ಹಿಂದುಳಿದ ತಾಲ್ಲೂಕುಗಳ ಮಾಹಿತಿ ತಂತ್ರಜ್ಞಾನ ಹಾಗೂ ಜೈವಿಕ ತಂತ್ರಜ್ಞಾನ ಉನ್ನತೀಕರಣ ಕಾರ್ಯಕ್ರಮಗಳ ಅನುಷ್ಠಾನ ಇತ್ಯಾದಿ,	**1000.00** (1-7) **ರೂ.300.00** (8)
2.	**3451-00-090-2-05 ಭಾರತೀಯ ಮಾಹಿತಿ ತಂತ್ರಜ್ಞಾನ ಸಂಸ್ಥೆ [ಐಐಐಟಿ-ಬಿ]** **101 ಸಹಾಯಾನುದಾನ ವೇತನಗಳು**	**465.00**	ಐಐಐಟಿ-ಬಿ ಸಂಸ್ಥೆಯಲ್ಲಿ ಲೇಡಿಸ್ ಹಾಸ್ಟೆಲ್, ಫುಡ್ ಕೋರ್ಟ್ ಮತ್ತು ಮಲ್ಟಿಪರ್ಪಸ್ ಕಟ್ಟಡ ನಿರ್ಮಾಣ ಕಾಮಗಾರಿಗಳಿಗಾಗಿ ಹಾಗೂ ಸಹಾಯಾನುದಾನ ಮತ್ತು ವೇತನಗಳು.	**ರೂ.465.00**

3.	**3451–00–090–2–08 ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರ –ಇತರೆ ಖರ್ಚು (059) (ಯೋಜನೆ)**	**500.00**	1. ಆಡಳಿತಾತ್ಮಕ ವೆಚ್ಚಕ್ಕಾಗಿ 2. ಸಮ್ಮೇಳನ, ಸಂಕೀರ್ಣ, ಸಮಾವೇಶ ಮತ್ತು ಕಾರ್ಯಗಾರ ಕೈಗೊಳ್ಳಲು ಮತ್ತು ಪಾಲ್ಗೊಳ್ಳಲು ರೂ.500.00 3. ಜಿಲ್ಲೆಗಳ ಭೂಸಂಪನ್ಮೂಲ ಮಾಹಿತಿ ವ್ಯವಸ್ಥೆ ತಯಾರಿಕೆ 4. ಜಿಯೋ ಇನ್‌ಫಾರ್ಮಟಿಕ್ಸ್ ಸೆಲ್ಸ್ –ಆವರ್ತಕ ವೆಚ್ಚವನ್ನು ಭರಿಸಲು 5. ಹೊಸ ತಂತ್ರಾಂಶಗಳ ಖರೀದಿ ಮತ್ತು ಇರುವ ತಂತ್ರಾಂಶಗಳ ಉನ್ನತೀಕರಣಕ್ಕಾಗಿ 6. ಜಿ.ಕೆ.ವಿ.ಕೆ ಆವರಣದಲ್ಲಿ ಕಟ್ಟಡ ನಿರ್ಮಾಣಕ್ಕಾಗಿ
4.	**3451–00–090–2–22 ಜೈವಿಕ ಮಾಹಿತಿ ಮತ್ತು ಅನ್ವಯಿಕ ಜೈವಿಕ ತಂತ್ರಜ್ಞಾನ ಸಂಸ್ಥೆ (ಐಬಿಎಬಿ) (100) ಧನ ಸಹಾಯ / ಪರಿಹಾರ**	**250.00**	ಐಬಿಎಬಿ ಸಂಸ್ಥೆಗೆ ಜೈವಿಕ ಮಾಹಿತಿ ತಂತ್ರಜ್ಞಾನ ಸೌಲಭ್ಯ ಕೇಂದ್ರಕ್ಕಾಗಿ ಧನ ಸಹಾಯ / ಪರಿಹಾರ **ರೂ.250.00**
5.	**3451–00–090–2–23 ಗ್ರಾಮೀಣ ಬಿಪಿಓಗಳು– 059–ಇತರೆ ಖರ್ಚು**	**100.00**	ಬಿಪಿಓಗಳ ಸ್ಥಾಪನೆಗಾಗಿ ಧನ ಸಹಾಯ **ರೂ.100.00**
6.	**3451–00–090–2–24 ಜೈವಿಕ ತಂತ್ರಜ್ಞಾನ ನೀತಿ ಇತರೆ ಖರ್ಚು (059) (ಯೋ)**	**500.00**	ಜೈವಿಕ ತಂತ್ರಜ್ಞಾನದ ನೀತಿಯನ್ನು ಅನುಷ್ಠಾನಗೊಳಿಸುವುದಕ್ಕಾಗಿ **ರೂ.500.00**
7.	**3451–00–090–2–25 ಅರೆ ನಿರ್ವಾಹಕ ನೀತಿ ಇತರೆ ಖರ್ಚು (059) (ಯೋ)**	**635.00**	ಅರೆ ನಿರ್ವಾಹಕ ನೀತಿಯನ್ನು ಅನುಷ್ಠಾನಗೊಳಿಸುವುದಕ್ಕಾಗಿ **ರೂ.635.00**
8.	**3451–00–090–2–30 ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಐಸಿಟಿ ನೀತಿ (059)** **3451–00–090–2–30 ಐಸಿಟಿ ಪಾಲಿಸಿ (133) ವಿಶೇಷ ಅಭಿವೃದ್ಧಿ ಯೋಜನೆ**	**200.00** **1400.00**	ಬೆಂಗಳೂರಿನಲ್ಲಿ ಸಂಶೋಧನಾ ಕೇಂದ್ರ ಸ್ಥಾಪನೆಗಾಗಿ ಹಾಗೂ ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ ಐಸಿಟಿ ನೀತಿಯನ್ನು ರಾಜ್ಯದ ಹಿಂದುಳಿದ ತಾಲ್ಲೂಕುಗಳಲ್ಲಿ ಅಳವಡಿಸಿ ಜಾರಿಗೊಳಿಸಲು ಕ್ರಮಗಳನ್ನು ಕೈಗೊಳ್ಳುವ ಬಗ್ಗೆ. **ರೂ.1600.00**
9.	**3451–00–090–2–31 ಹಾರ್ಡ್‌ವೇರ್ ಪಾಲಿಸಿ**	**200.00**	ಹಾರ್ಡ್‌ವೇರ್ ಪಾಲಿಸಿಯನ್ನು ಜಾರಿಗೊಳಿಸುವುದಕ್ಕಾಗಿ **ರೂ.200.00**

10.	5465–01–190–1–09 ಜೈವಿಕ ತಂತ್ರಜ್ಞಾನ ಬಯೋಟೆಕ್ ಪಾರ್ಕ್	1250.00	ಬೆಂಗಳೂರು, ಮೈಸೂರು, ಮಂಗಳೂರು, ಧಾರವಾಡ, ಬೀದರ್ ಮುಂತಾದ ಕಡೆಗಳಲ್ಲಿ ಜೈವಿಕ ತಂತ್ರಜ್ಞಾನ ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸುವುದಕ್ಕಾಗಿ **ರೂ.1250.00**
11.	5465–01–190–1–13 ಹಂತ 2 ನಗರಗಳ ಸಲುವಾಗಿ ಕಿಯೋನಿಕ್ಸ್ ನಲ್ಲಿ ಸಾಮ್ಯಷೇರು – ಮಾಹಿತಿ ತಂತ್ರಜ್ಞಾನ ಅಭಿವೃದ್ಧಿ – 059 – ಇತರೆ ಖರ್ಚು ವಿಶೇಷ ಅಭಿವೃದ್ಧಿ ಯೋಜನೆ–133	200.00 300.00	ಮೂಲಭೂತ ಸೌಕರ್ಯಗಳನ್ನು ಒದಗಿಸಿ ಆ ಮೂಲಕ ಮಾಹಿತಿ ತಂತ್ರಜ್ಞಾನ ಅಭಿವೃದ್ಧಿಯನ್ನು ಹಿಂದುಳಿದ ತಾಲ್ಲೂಕುಗಳಲ್ಲಿ ಕೈಗೊಳ್ಳುವ ಬಗ್ಗೆ. **ರೂ.500.00**
	ಯೋಜನೆ ಅಡಿ ಒಟ್ಟು	7300.00	**ರೂ.7300.00**
12.	5465–01–190–1–01 ಮಾಹಿತಿ ಬಾಂಡು (ಯೋಜನೇತರ) 240–ಸಾಲಮೇಲುಸ್ತುವಾರಿ	197.00	ಮಾಹಿತಿ ಬಾಂಡು ಸಾಲಮೇಲುಸ್ತುವಾರಿ **ರೂ.197.00**
	ಯೋಜನೇತರ ಒಟ್ಟು	197.00	**ರೂ.197.00**

ಇ. ರಾಮಕೃಷ್ಣಪ್ಪ
ಸರ್ಕಾರದ ಅಧೀನ ಕಾರ್ಯದರ್ಶಿ
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

ಪಿ.ಆರ್. 1183

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯ

ವಿಷಯ: ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ **ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗಕ್ಕೆ** ಸಂಬಂಧಿಸಿದಂತೆ ಮುಂದುವರಿದ ಯೋಜನೆ ಮತ್ತು ಯೋಜನೇತರ ಯೋಜನೆಗಳನ್ನು 2012–13ನೇ ಸಾಲಿನ ಅವಧಿಗೆ ಮುಂದುವರೆಸುವ ಬಗ್ಗೆ.

ಓದಲಾಗಿದೆ: ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿ:05.04.2012 ರಂದು ನಡೆದ ಸಭೆ.

ಪ್ರಸ್ತಾವನೆ:

ಮೇಲೆ ಓದಲಾದ ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಪ್ರಧಾನ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ 05–04–2012ರಂದು ನಡೆದ ಸಭೆಯಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗಕ್ಕೆ 2012–13ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ವೆಚ್ಚದಲ್ಲಿ ನಿಗದಿಪಡಿಸಿರುವ ಯೋಜನಾ ವೆಚ್ಚ ರೂ.4700.00ಲಕ್ಷಗಳಿಗೆ ಮತ್ತು ಯೋಜನೇತರ ವೆಚ್ಚವಾಗಿ ರೂ.1.00ಲಕ್ಷಗಳಿಗೆ

ಸೀಮಿತಗೊಳಿಸಿ 2012–13ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಆದೇಶವನ್ನು ಹೊರಡಿಸಲು ನಿರ್ದರಿಸಲಾಗಿದ್ದು, ಅದರಂತೆ ಈ ಕೆಳಕಂಡ ಆದೇಶ.

ಸರ್ಕಾರಿ ಆದೇಶ ಸಂಖ್ಯೆ: ವಿಯಇ 58 ವಿತ್ರಮ 2012, ಬೆಂಗಳೂರು, ದಿನಾಂಕ:05.04.2012.

ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗಕ್ಕೆ 2012–13ನೇ ಆರ್ಥಿಕ ಸಾಲಿನ ಆಯವ್ಯಯ ಅಂದಾಜು ವೆಚ್ಚದಲ್ಲಿ ನಿಗದಿಪಡಿಸಿರುವ ಯೋಜನಾ ವೆಚ್ಚ ರೂ.4700.00ಲಕ್ಷಗಳಿಗೆ ಮತ್ತು ಯೋಜನೇತರ ವೆಚ್ಚವಾಗಿ ರೂ.1.00ಲಕ್ಷಗಳಿಗೆ ಸೀಮಿತಗೊಳಿಸಿ 2012–13ನೇ ಸಾಲಿನ ಮುಂದುವರೆದ ಯೋಜನಾ ಕಾರ್ಯಕ್ರಮಗಳ ಆದೇಶವನ್ನು ತಕ್ಷಣದಿಂದ ಅನ್ವಯವಾಗುವಂತೆ ಮಂಜೂರಾತಿ ನೀಡಿ ಹೊರಡಿಸಲಾಗಿದೆ.

2012–13ನೇ ಸಾಲಿನ ಮುಂದುವರೆದ ಕಾರ್ಯಕ್ರಮ ಮತ್ತು ಲೆಕ್ಕಶೀರ್ಷಿಕೆವಾರು ಯೋಜನೆ ಮತ್ತು ಯೋಜನೇತರ ಹಂಚಿಕೆಯನ್ನು ಈ ಆದೇಶಕ್ಕೆ ಲಗತ್ತಿಸಲಾದ ಅನುಬಂಧದಲ್ಲಿ ಕಾಣಿಸಲಾಗಿದೆ.

ಈ ಆದೇಶವನ್ನು ಆರ್ಥಿಕ ಇಲಾಖೆಯ ಆದೇಶ ಸಂಖ್ಯೆ: ಎಫ್‌ಡಿ 01 ಟಿಎಫ್‌ಪಿ 2008, ದಿನಾಂಕ: 16–05–2008ರಲ್ಲಿ ಇಲಾಖಾ ಪ್ರಧಾನ ಕಾರ್ಯದರ್ಶಿಯವರಿಗೆ ನೀಡಲಾದ ಪ್ರದತ್ತವಾದ ಅಧಿಕಾರದನ್ವಯ ಆರ್ಥಿಕ ಇಲಾಖೆಯ ಸಹಮತಿ ಇದೆ ಎಂದು ಭಾವಿಸಿ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಅಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ.
ಟಿ.ವಿ.ಸುಜಾತ
ಪೀಠಾಧಿಕಾರಿ (ವಿ&ತಂ)
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಅನುಬಂಧ

ಸರ್ಕಾರಿ ಆದೇಶ ಸಂಖ್ಯೆ:ವಿಯಇ 58 ವಿತ್ರಮ 2012, ದಿನಾಂಕ:05–04–2012

ವಿಜ್ಞಾನ ಮತ್ತು ತಂತ್ರಜ್ಞಾನ ವಿಭಾಗದ 2012–13ನೇ ಸಾಲಿನ ಮುಂದುವರೆದ ಯೋಜನೆಗಳು

. ರೂ. ಲಕ್ಷಗಳಲ್ಲಿ

ಕ್ರ. ಸಂ.	ಲೆಕ್ಕ ಶೀರ್ಷಿಕೆ	2012–13ನೇ ಸಾಲಿನ ಆಯವ್ಯಯ ಹಂಚಿಕೆ	ಯೋಜನೆ/ವೈಜ್ಞಾನಿಕ ಸಂಸ್ಥೆ/ ಚಟುವಟಿಕೆಗಳಿಗೆ ಸಹಾಯಾನುದಾನದ ವಿವರ	ಇಲಾಖೆಯ ಹಂಚಿಕೆ
1	3425–60–200–0–01–(101) (ಯೋಜನೆ)	1500.00	ವೈಜ್ಞಾನಿಕ ಸಂಸ್ಥೆಗಳಿಗೆ/ ಸಹಾಯಾನುದಾನ 1) ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ, 2) ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, 3) ಜವಾಹರಲಾಲ್ ನೆಹರು ತಾರಾಲಯ, 4) ಕರ್ನಾಟಕ ರಾಜ್ಯ ವಿಜ್ಞಾನ ಮತ್ತು ತಂತ್ರವಿದ್ಯಾ ಮಂಡಳಿ, 5) ಇತರೆ ವೈಜ್ಞಾನಿಕ ಸಂಸ್ಥೆಗಳು/ ಕಾರ್ಯಚಟುವಟಿಕೆಗಳಿಗೆ ಸಹಾಯಾನುದಾನ 6) ಚಿತ್ರದುರ್ಗ ಜಿಲ್ಲೆ, ಚಳ್ಳಕೆರೆ, ಭಾರತೀಯ ವಿಜ್ಞಾನ ಸಂಸ್ಥೆ	1500.00
2	3425–60–200–0–16(101)(ಯೋಜನೆ)	300.00	ವಿಜ್ಞಾನ ಮತ್ತು ತಂತ್ರಜ್ಞಾನ ಯೋಜನೆಗಳ ಸಹಾಯಾನುದಾನ	300.00
3	3425–60–200–0–19(101)(ಯೋಜನೆ)	100.00	ನಾನೊ ತಂತ್ರಜ್ಞಾನಕ್ಕೆ ಬೆಂಬಲ ಸಹಾಯಾನುದಾನ	100.00
4	3425–60–200–0–20(101)(ಯೋಜನೆ)	600.00	ಜಿಲ್ಲಾ ವಿಜ್ಞಾನ ಕೇಂದ್ರಗಳು ಸಹಾಯಾನುದಾನ	600.00
5	3425–60–600–0–02 (059) (ಯೋಜನೆ)	1000.00	ವಿಜ್ಞಾನ ಮತ್ತು ತಂತ್ರಜ್ಞಾನ ದಾರ್ಶನಿಕ ಸಮೂಹ ದಾರ್ಶನಿಕ ಸಮೂಹ ಕಾರ್ಯಕ್ರಮಕ್ಕೆ	1000.00
6	3425–60–600–0–03 (059) (ಯೋಜನೆ)	500.00	ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ಸುಧಾರಣೆಗೆ ಕರ್ನಾಟಕ ನಿಧಿ (K-Fist)	500.00

ಕ್ರ. ಸಂ.	ಲೆಕ್ಕ ಶೀರ್ಷಿಕೆ	2012–13ನೇ ಸಾಲಿನ ಆಯವ್ಯಯ ಹಂಚಿಕೆ	ಯೋಜನೆ/ವೈಜ್ಞಾನಿಕ ಸಂಸ್ಥೆ/ ಚಟುವಟಿಕೆಗಳಿಗೆ ಸಹಾಯಾನುದಾನದ ವಿವರ	ಇಲಾಖೆಯ ಹಂಚಿಕೆ
7	3455–00–200–0–01 (059) (ಯೋಜನೆ)	700.00	ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ಉಸ್ತುವಾರಿ ಕೇಂದ್ರ (ಕ್ಷಾಮ ನಿರ್ವಹಣಾ ಕೇಂದ್ರ)	700.00
8	3425–60–200–0–01 (104) (ಯೋಜನೇತರ)	1.00	ಭಾರತೀಯ ವಿಜ್ಞಾನ ಸಂಸ್ಥೆ ಬೆಂಗಳೂರು. (ಅಂಶದಾನ)	1.00
	ಒಟ್ಟು ಮೊತ್ತ	**4701.00**	**ಒಟ್ಟು ಮೊತ್ತ**	**4701.00**

ಟಿ.ವಿ.ಸುಜಾತ
ಪೀಠಾಧಿಕಾರಿ (ವಿ&ತಂ)
ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ.

ಪಿ.ಆರ್. 1184

INFRASTRUCTURE DEVELOPMENT SECRETARIAT

Sub: Release of Funds for acquisition of 3.21acres of Land comprising of Deccan Park building, South West of Mangalore Airport, Mangalore.

Read:
1. D.O Letter No. LAQ MSCC/ 178/ 10 – 11/ B 1 C No. 34132 dated 30.09.2011 of the Deputy Commissioner, Dakshina Kannada District.
2. Letter No. AV 20013/ 101/ 2000 – LM/ dated 06.03.2012 of the Executive Director (LM) Airports Authority of India, New Delhi.
3. Letter No. FD 426 Exp-II 2012, dated: 27-03-2012.

Preamble:

In the letter read at Sl. No 1 above, the Deputy Commissioner, Dakshina Kannada District had sent a proposal for release of Rs.3.09 crores for acquisition of 3.21 acres of land with the Deccan Park building situated near the Mangalore Airport which is being stated as a security threat to the airport by the Airport Director, Mangalore Airport. Site inspection was done and the Director, Mangalore Airport was informed that the issue could be examined by the Government of Karnataka, if a proposal is received from the Chairman, Airport Authority of India, New Delhi.

2. In the letter read at Sl. No 2 above, the Executive Director (LM) Airports Authority of India, New Delhi has stated that the Deccan Park area measuring 3.21 acres is posing operational difficulties and security risks due to its very close proximity to the airport boundary wall and hence has sent a proposal for acquiring this land by the Government of Karnataka and to hand over the same to Airports Authority of India, free of cost and free from all encumbrances after demolition of the structure.

3. The proposal has been examined in detail and hence the following order.

GOVERNMENT ORDER NO.IDD 2 DIA 2008, BANGALORE DATED: 28-03-2012

After careful examination of the proposal, sanction is accorded for the release of Rs.309.00 lakhs (Rupees Three hundred and nine lakhs only) to the Deputy Commissioner, Dakshina Kannada District for acquisition of land comprising of Deccan Park Building, South West of Mangalore Airport.

2. The expenditure shall be met under the Head of Account 5465–01–190–1–05 Development of Minor Airports (plan) – 133 SDP.

3. The Deputy Commissioner, Dakshina Kannada District is authorized to draw the amount from the District Treasury Dakshina Kannada District. The Deputy Director, NMC, Bangalore is requested to take necessary action to upload this amount to the Deputy Commissioner, Dakshina Kannada District, Account.

4. This order is issued with the concurrence of the Finance Department, vide endorsement No. FD 426 EXP-I/ 2012 dated 27.03.2012.

By Order and in the name of Governor of Karnataka,
S.J. SAMPATH KUMAR
Under Secretary to Govt.
Infrastructure Development Department.

P.R. 1189

ಮೂಲಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ: ಮೈಸೂರು – ಬೆಂಗಳೂರು ರೈಲ್ವೆ ಮಾರ್ಗದಲ್ಲಿನ ನಾಗನಹಳ್ಳಿ ರೈಲು ನಿಲ್ದಾಣದಲ್ಲಿನ ಎಲ್.ಸಿ ಸಂಖ್ಯೆ 107ರ ಬದಲಾಗಿ ರಸ್ತೆ ಕೆಳಸೇತುವೆಯ ಅಪ್ರೋಚ್ ರಸ್ತೆಯ ನಿರ್ಮಾಣದ ಭೂಸ್ವಾಧಿನ ವೆಚ್ಚವನ್ನು ಭರಿಸಲು ಹಣ ಬಿಡುಗಡೆ ಕುರಿತು.

ಓದಲಾಗಿದೆ:
1. ಸರ್ಕಾರಿ ಆದೇಶ ಸಂಖ್ಯೆ.ಮೂಅಇ 41 ರಾರಾಹೆ 2011 ದಿನಾಂಕ 05.03.2012.
2. ದಿನಾಂಕ 2.8.2011 ಸಂಖ್ಯೆ ಎಲ್. ಕ್ಯು. ಸಿ. ಆರ್. 16/2011–12ರ ಮೈಸೂರು ಜಿಲ್ಲಾಧಿಕಾರಿಯವರ ಪತ್ರ.
3. ದಿನಾಂಕ11.7.2011 ಸಂಖ್ಯೆ ಸಂಕದ: ಸೇಮೈ: ರಕೆಸೇ: ನಾಹಳ್ಳಿ; ಎಲ್.ಸಿ.107 ರ ಮುಖ್ಯ ಇಂಜಿನಿಯರ್ (ದ) ಸಂಪರ್ಕ ಮತ್ತು ಕಟ್ಟಡ, ಲೋಕೋಪಯೋಗಿ ಇಲಾಖೆ, ಬೆಂಗಳೂರು ಇವರ ಪತ್ರ.
4. ಸರ್ಕಾರಿ ಆದೇಶ ಸಂಖ್ಯೆ. ಎಫ್‌ಡಿ 417 ಬಿಆರ್‌ಎಸ್ 2011, ದಿ: 26–03–2011.

ಪ್ರಸ್ತಾವನೆ:

ಮೇಲೆ ಓದಲಾದ ಕ್ರ.ಸಂ. (1) ರ ಆದೇಶದಲ್ಲಿ ಬೆಂಗಳೂರು–ಮೈಸೂರು ಜೋಡಿ ರೈಲು ಮಾರ್ಗದಲ್ಲಿನ ನಾಗನಹಳ್ಳಿ ರೈಲು ನಿಲ್ದಾಣದಲ್ಲಿ ಬರುವ ಎಲ್.ಸಿ. ಸಂಖ್ಯೆ.107 ರ ಬದಲಾಗಿ ರಸ್ತೆ ಕೆಳ ಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣದ ಕಾಮಗಾರಿಗೆ ರೂ.390 ಲಕ್ಷಗಳ ಮೊತ್ತಕ್ಕೆ ನಿರ್ಮಿಸಲು ಆಡಳಿತಾತ್ಮಕ ಅನುಮೋದನೆಯನ್ನು ನೀಡಲಾಗಿದೆ.

2. ಮೇಲೆ ಓದಲಾದ (2) ರ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಇವರು ರಸ್ತೆ ಕೆಳಸೇತುವೆಯ ಅಪ್ರೋಚ್ ರಸ್ತೆ ನಿರ್ಮಾಣಕ್ಕೆ 4.02 ಎಕರೆ ಭೂಸ್ವಾಧೀನದ ಅವಶ್ಯಕತೆಯಿದ್ದು, ಭೂಸ್ವಾಧೀನ ಸರ್ವೇ ಕೈಗೊಂಡು ಉಪ ನೋಂದಣಾಧಿಕಾರಿಯವರ ಕಾರ್ಯಾಲಯದ ನೋಂದಣಿ ವಹಿವಾಟಿನ ಬೆಲೆಯ ಅಂಕಿ ಅಂಶದಂತೆ ಎಕರೆ ಒಂದಕ್ಕೆ ರೂ 10.00 ಲಕ್ಷಗಳಂತೆ ಮಾರುಕಟ್ಟೆ ಬೆಲೆ ನಿಗದಿಪಡಿಸಿ ಒಟ್ಟು ಭೂಸ್ವಾಧೀನದ ವೆಚ್ಚ ರೂ.66,28,600/–ಗಳು ಆಗುವುದೆಂದು, ಈ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲು ಅನುದಾನವನ್ನು ಬಿಡುಗಡೆ ಮಾಡಬೇಕೆಂದು ಕೋರಿದ್ದಾರೆ.

3. ಮೇಲೆ ಓದಲಾದ ಕ್ರ.ಸಂ (3) ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಲೋಕೋಪಯೋಗಿ ಸಂಪರ್ಕ ಮತ್ತು ಕಟ್ಟಡ (ದ), ಬೆಂಗಳೂರು, ಇವರು ಎಲ್.ಸಿ ಸಂಖ್ಯೆ 107 ರ ಬದಲಾಗಿ ರಸ್ತೆ ಕೆಳಸೇತುವೆಯನ್ನು ರೈಲ್ವೆಯವರು ಈಗಾಗಲೇ ನಿರ್ಮಿಸಲಾಗಿದ್ದು, ಟಿ.ವಿ.ಯು ಒಂದು ಲಕ್ಷಕ್ಕಿಂತ ಕಡಿಮೆ ಅಂದರೆ 6514 ಟಿವಿಯು ಕೌಂಟ್ ಇರುವುದರಿಂದ ಕಾಮಗಾರಿಯನ್ನು ವೆಚ್ಚ ಹಂಚಿಕೆ ಆಧಾರದ ಮೇಲೆ ಕೈಗೆತ್ತಿಕೊಂಡಿರುವುದಿಲ್ಲವೆಂದು, ಸೇತುವೆಯ ಕಾಮಗಾರಿಯನ್ನು ರೈಲ್ವೆಯಿಂದಲೇ ನಿರ್ವಹಿಸಲಾಗಿರುವುದರಿಂದ, ಅಪ್ರೋಚ್ ರಸ್ತೆಯನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೆತ್ತಿಕೊಳ್ಳಬೇಕಾಗಿದೆ ಎಂದು ಮತ್ತು ಅಪ್ರೋಚ್ ರಸ್ತೆ ನಿರ್ಮಾಣಕ್ಕೆ ಅಗತ್ಯವಾಗಿ ಬೇಕಾಗಿರುವ ಭೂಸ್ವಾಧೀನದ ವೆಚ್ಚ ರೂ.80.00 ಲಕ್ಷಗಳನ್ನು ಬಿಡುಗಡೆ ಮಾಡಬೇಕೆಂದು ಕೋರಿದ್ದಾರೆ.

4. ಮೇಲೆ ಓದಲಾದ (4)ರ ಆದೇಶದಲ್ಲಿ ಆರ್ಥಿಕ ಇಲಾಖೆಯು ರೂ.66.29 ಲಕ್ಷಗಳನ್ನು ಲೆಕ್ಕ ಶೀರ್ಷಿಕೆ 5465–01–190–3–02–211 (ಬಂಡವಾಳ ಹೂಡಿಕೆ)ರಡಿಯಲ್ಲಿ ಮರು ಹೊಂದಾಣಿಕೆ ಮೂಲಕ ಬಿಡುಗಡೆ ಮಾಡಲು ಮಂಜೂರಾತಿ ನೀಡಿದೆ.

5. ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರಿ ಆದೇಶ ಸಂಖ್ಯೆ ಮೂಅಇ 41 ರಾರಾಹೆ 2011, ಬೆಂಗಳೂರು, ದಿನಾಂಕ: 29–03–2012.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಬೆಂಗಳೂರು – ಮೈಸೂರು ರೈಲು ಮಾರ್ಗದ ನಾಗನಹಳ್ಳಿ ರೈಲು ನಿಲ್ದಾಣದಲ್ಲಿ ಬರುವ ಎಲ್.ಸಿ ಸಂಖ್ಯೆ 107ರ ಬದಲಾಗಿ ರಸ್ತೆ ಕೆಳಸೇತುವೆಯ ಅಪ್ರೋಚ್ ರಸ್ತೆಯ ನಿರ್ಮಾಣದ ಕಾಮಗಾರಿಯ ಭೂಸ್ವಾಧೀನಕ್ಕಾಗಿ ರೂ.66.29 ಲಕ್ಷಗಳನ್ನು (ರೂಪಾಯಿ ಅರವತ್ತಾರು ಲಕ್ಷ ಇಪ್ಪತ್ತೊಂಬತ್ತು ಸಾವಿರಗಳು ಮಾತ್ರ) ಬಿಡುಗಡೆ ಮಾಡಿದೆ. ಈ ಮೊತ್ತವನ್ನು 2011–12ನೇ ಸಾಲಿನ ಆಯವ್ಯಯದ ಲೆಕ್ಕ ಶೀರ್ಷಿಕೆ "5465–01–190–3–04 ಯೋಜನೆ–211 ಬಂಡವಾಳ ಇದರಡಿಯಲ್ಲಿ ರಸ್ತೆ ಮೇಲು ಸೇತುವೆ/ ಕೆಳ ಸೇತುವೆಗಳ ನಿರ್ಮಾಣಕ್ಕೆ ಒದಗಿಸಿರುವ ರೂ.21.49 ಕೋಟಿಗಳ ಮೊತ್ತವು ಸಂಪೂರ್ಣವಾಗಿ ವೆಚ್ಚವಾಗಿರುವುದರಿಂದ, ರೂ.66.29 ಲಕ್ಷಗಳನ್ನು ಹಾಸನ – ಮಂಗಳೂರು ಗೇಜ್ ಪರಿವರ್ತನೆ ಕಾಮಗಾರಿಯ ಲೆಕ್ಕ ಶೀರ್ಷಿಕೆ 5465–01–190–3–02–211 ಬಂಡವಾಳ ಹೂಡಿಕೆ (ಯೋಜನೆ) ಇದರಡಿಯಲ್ಲಿ ಉಳಿದಿರುವ ರೂ.100.00 ಲಕ್ಷಗಳಿಂದ, ಮರು ಹೊಂದಾಣಿಕೆ ಮೂಲಕ ಬಿಡುಗಡೆ ಮಾಡಿದೆ.

2) ಈ ಮೊತ್ತವನ್ನು ಜಿಲ್ಲಾಧಿಕಾರಿಗಳು, ಮೈಸೂರು ಜಿಲ್ಲೆ, ಮೈಸೂರು ಇವರು ಜಿಲ್ಲಾ ಖಜಾನೆ, ಮೈಸೂರು, ಇಲ್ಲಿ ಡ್ರಾ ಮಾಡಲು ಅಧಿಕರಿಸಿದೆ. ಉಪ ನಿರ್ದೇಶಕರು, ಎನ್ ಎಂ ಸಿ, ಬೆಂಗಳೂರು, ಇವರು ಈ ಮೊತ್ತವನ್ನು ಮೈಸೂರು ಜಿಲ್ಲಾಧಿಕಾರಿಗಳ ಖಾತೆಗೆ ಅಪ್ ಲೋಡ್ ಮಾಡುವುದು. ಈ ಹಣವನ್ನು ಯೋಜನೆಗೆ ವೆಚ್ಚ ಮಾಡಿ ಉಪಯೋಗಿತ ಪ್ರಮಾಣ ಪತ್ರವನ್ನು ಮೈಸೂರು ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸಲ್ಲಿಸತಕ್ಕದ್ದು.

3) ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ ಎಫ್‌ಡಿ 368 ವೆಚ್ಚ–1/ 2012 ದಿನಾಂಕ 26.03.2012ರ ಸಹಮತಿ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ

ಎಸ್.ಜೆ.ಸಂಪತ್ ಕುಮಾರ್

ಸರ್ಕಾರದ ಅಧೀನ ಕಾರ್ಯದರ್ಶಿ

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ.

ಪಿ.ಆರ್. 1185